ಜನಪ್ರಿಯ ಗ್ರಂಥಮಾಲೆ

೩೭೬

ಜನಪದ ಗೀತಗಳಲ್ಲಿ ಶೃಂಗಾರ

ಗುರುಪಾದ ಮರಿಗುದ್ದಿ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
ಮಾರ್ಚ, ೧೯೮೭

ಉಪನ್ಯಾಸ ಗ್ರಂಥಮಾಲೆ
೩೭೬

ಜನಪದ ಗೀತಗಳಲ್ಲಿ ಶೃಂಗಾರ

ಗುರುಪಾದ ಮರಿಗುದ್ದಿ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಮಾರ್ಚ, ೧೯೮೭

ಪ್ರಕಾಶಕರು :

ಎಸ್. ಬಿ. ನಾಯಕ

ನಿರ್ದೇಶಕರು, ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು

ಮಾರ್ಚ, ೧೯೮೭

ಬೆಲೆ : ೫೦ ಪೈಸೆ

ಮುದ್ರಕರು :

ರಾಜಶ್ರೀ ಪ್ರಿಂಟಿಂಗ ಪ್ರೆಸ್

ತಡಕೋಡ ಗಲ್ಲಿ

ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿ ಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವ ದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮುನ್ನುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೭೫ ಪುಸ್ತಕಗಳು ಪ್ರಕಟ ವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿ-ರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋ-ಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಸ್. ಜಿ. ದೇಸಾಯಿ
ಕುಲಪತಿಗಳು

ಅರಿಕೆ

ಪ್ರಸಾರಾಂಗದ ಆಶ್ರಯದಲ್ಲಿ ವಿಜಾಪೂರ ಜಿಲ್ಲೆಯ ದೇವರಹಿಪ್ಪರಿಗೆ ಗ್ರಾಮದಲ್ಲಿ ದಿ. ೨೬-೨-೧೯೮೨ ರಂದು ಜರುಗಿದ ೩೧೧ನೆಯ ಉಪನ್ಯಾಸ ಶಿಬಿರದಲ್ಲಿ ನನಗೆ ಪಾಲ್ಗೊ-ಳ್ಳುವ ಅವಕಾಶ ಲಭಿಸಿತ್ತು. 'ಜಾನಪದ ಸಾಹಿತ್ಯದಲ್ಲಿ ಶೃಂಗಾರ' ಎಂಬ ವಿಷಯವನ್ನು ಜನಪದ ಗೀತಗಳಿಗೆ ಸೀಮಿತಗೊಳಿಸಿ-ಕೊಂಡು 'ಜನಪದ ಗೀತಗಳಲ್ಲಿ ಶೃಂಗಾರ' ಎಂಬ ತಲೆಬರೆಹ ದಡಿಯಲ್ಲಿ ನಾನು ನೀಡಿದ ಉಪನ್ಯಾಸದ ವಿಸ್ತೃತ ಹಾಗೂ ಪರಿಷ್ಕೃತರೂಪವೇ ಈ ಚಿಕ್ಕ ಪುಸ್ತಕ. ಇದರಲ್ಲಿ ಜನಪದ ಗೀತ-ಗಳಲ್ಲಿ ಕಾಣುವ ಶೃಂಗಾರದ ವಿವಿಧ ಮುಖಗಳನ್ನು ಪರಿಚಯಿ-ಸುವ, ಅವುಗಳ ಸ್ವಾರಸ್ಯವನ್ನು ಎತ್ತಿ ತೋರಿಸುವ ಪ್ರಯತ್ನ ಮಾಡಲಾಗಿದೆ. ಇದು ಜನಪದ ಗೀತಗಳಲ್ಲಿಯ ಶೃಂಗಾರದ ಅಧ್ಯಯನಕ್ಕೆ ತೊಡಗಲು ಓದುಗರಿಗೆ ಹೆಚ್ಚಿನ ಪ್ರೇರಣೆಯ ನ್ನೊದಗಿಸಿದರೆ ನನ್ನ ಪ್ರಯತ್ನ ಸಾರ್ಥಕವೆಂದು ಭಾವಿಸುವೆ.

ಮೇಲಿನ ವಿಷಯವನ್ನು ಸೂಚಿಸಿ ಉಪನ್ಯಾಸ ನೀಡಲು ಹಾಗೂ ಅದು ಪುಸ್ತಕರೂಪದಲ್ಲಿ ಹೊರಬರಲು ಅವಕಾಶ ನೀಡಿದ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರು, ಹಾಗೂ ಸಹಾಯಕ ನಿರ್ದೇಶಕರಿಗೆ ನಾನು ಕೃತಜ್ಞನಾಗಿದ್ದೇನೆ. ಈ ಲೇಖನವನ್ನು ಸಿದ್ಧಪಡಿಸುವಲ್ಲಿ ನಾನು ಆಕರವಾಗಿ ಬಳಸಿ ಕೊಂಡ ಗ್ರಂಥಗಳ ಸಂಪಾದಕರಿಗೆ, ಲೇಖಕರಿಗೆ ಹಾಗೂ ನೆರ ವಾದ ನನ್ನ ಆತ್ಮೀಯರೆಲ್ಲರಿಗೆ ಆಭಾರಿಯಾಗಿದ್ದೇನೆ.

ಶ್ರೀ ಖಾಸ್ಗತೇಶ ಕಾಲೇಜು
ತಾಳಿಕೋಟಿ

ಗುರುಪಾದ ಫಿವಾರಿ

ಪರಿವಿಡಿ

೧. ಪ್ರಸ್ತಾವನೆ

ಬದುಕಿನ ಬಹುಮುಖ್ಯ ಮೂಲಭೂತವಾದ ಸ್ಥಾಯಿ ಭಾವ ಪ್ರೀತಿ. ಇಡಿಯ ಬದುಕೇ ಈ ಪ್ರೀತಿಯ ಆವರಣದಲ್ಲಿ ಹುದುಗಿಕೊಂಡಿದೆ. "ಬಸಿರಿನಿಂದ ಹೊರಕ್ಕೆ ಬಿದ್ದ ಕ್ಷಣದಿಂದ ಉಸಿರು ನಿಲ್ಲುವತನಕ ಮನುಷ್ಯ ಜೀವನವನ್ನು ನಿಯಂತ್ರಿಸುವ ಏಕಸೂತ್ರ ಪ್ರೀತಿ." ಈ ಪ್ರೀತಿಯ ಮುಖಗಳು ಹಲವು: ಭಕ್ತಿ, ವಾತ್ಸಲ್ಯ, ಸ್ನೇಹ, ಪ್ರಣಯ, ಗುರುಹಿರಿಯರನ್ನು ದೇವರನ್ನು ಪ್ರೀತಿಯಿಂದ ಗೌರವಿಸುವ ಆದರಿಸುವ ರೀತಿ ಭಕ್ತಿಯಾದರೆ, ಕಿರಿಯರ ಮೇಲಣ ಒಲವು ವಾತ್ಸಲ್ಯವೆನ್ನಿಸಿಕೊಳ್ಳುತ್ತದೆ. ಸಮಾನ ವಯಸ್ಕರ ಪ್ರೀತಿ, ವಿಶ್ವಾಸಗಳು ಸ್ನೇಹವೆನ್ನಿಸಿಕೊಂಡರೆ, ಅದೇ ವಯಸ್ಕರು ಭಿನ್ನಲಿಂಗಿಗಳಾದಾಗ (ಗಂಡು ಮತ್ತು ಹೆಣ್ಣು) ಅಲ್ಲಿ ಕಾಣಿಸುವ ಪ್ರೀತಿಗೆ ಶೃಂಗಾರದ ಅರ್ಥ ಪ್ರಾಪ್ತವಾಗುತ್ತದೆ. ಹೀಗೆ ವಾತ್ಸಲ್ಯ, ಸ್ನೇಹ, ಭಕ್ತಿ, ಪ್ರೇಮಗಳ ರೂಪದಲ್ಲಿ ಕಾಣಿಸಿಕೊಳ್ಳುವ ಪ್ರೀತಿಯ ಪರಿಧಿಯಲ್ಲಿ ಶೃಂಗಾರಕ್ಕೆ ತನ್ನದೇ ಆದ ವಿಶಿಷ್ಟ ಪಾತ್ರವಿದೆ.

ಮಾನವ ಜೀವನದ ಮೂರು ಮುಖ್ಯ ಮಜಲುಗಳು : ಎಳವೆ, ಹರೆಯ, ಮುಪ್ಪು. ಹುಟ್ಟಿದ ಪ್ರತಿಯೊಂದು ಜೀವ ಈ ಮೂರು ಘಟ್ಟಗಳಲ್ಲಿ ಹಾಯ್ದು ಕಡೆಗೆ ಮಣ್ಣಾಗುತ್ತದೆ. ಅಂಗಾಂಗಗಳು, ಬುದ್ಧಿ, ಭಾವ, ಮನಸ್ಸು ಮೊದಲಾದವೆಲ್ಲ ಹಂತಹಂತವಾಗಿ ಬೆಳೆಯುತ್ತ ಹೊಸ ಹೊಸ ಅನುಭವಗಳನ್ನು ಪಡೆದುಕೊಳ್ಳುತ್ತ ಬದುಕು ಮುನ್ನಡೆಯುತ್ತದೆ. ಬಾಲ್ಯದಲ್ಲಿ ಶಾರೀರಿಕ ಬೆಳವಣಿಗೆಯೊಂದಿಗೆ ಕುತೂಹಲ, ಜಿಜ್ಞಾಸೆ, ಕೌತುಕ

ಗಳು ಹೊರ ಜಗತ್ತನ್ನು ಕಾಣುವಲ್ಲಿ ಕಾಣಿಸಿಕೊಂಡರೆ ತಾರುಣ್ಯ ದಲ್ಲಿ ಅವಯುವಗಳು ಪುಷ್ಟಿಯಾಗಿ ಬೆಳೆದು ಹೊಸ ಶಕ್ತಿ, ಉತ್ಸಾಹ, ಉಮೇದ-ಗಳು ಪ್ರಕಟಗೊಂಡು ಭಾವಕೋಶ ಜಾಗೃತಗೊಂಡು ಸುಪ್ತವಾದ ಕಾಮನೆಗಳ ಎಚ್ಚರದಿಂದ ಇಂದ್ರಿಯುಗಳು ತುಡಿಯುತ್ತವೆ. ತನ್ನಲ್ಲಾಗಿರುವ ಬದಲಾವಣೆ ಗಳಿಂದಾಗಿ ವ್ಯಕ್ತಿಗೆ ಹೊರಜಗತ್ತಿನಲ್ಲಿಯೂ ಹೊಸತನದ, ಚೆಲು ವಿನ, ನೋಟಗಳು ಭಾವಪರವಶಗೊಳಿಸುತ್ತವೆ. ತಾರುಣ್ಯದಲ್ಲಿ ಬುದ್ಧಿಯ ವಿಕಾಸ ಕೆಲಮಟ್ಟಿಗಾದರೂ ಭಾವದ ರಭಸವೇ ಹೆಚ್ಚು. ವಿವೇಕ, ವಿವೇಚನೆ, ಸಂಯುಮ, ಸಂಕೋಚಗಳಿಗಿಂತ ದುಡುಕು, ಹುಡುಗಾಟಿಕೆ, ಆವೇಶ, ಆವೇಗಗಳು ಪ್ರಬಲ ಸಾಮಾಜಿಕತೆಯ ಅರಿವೂ ಮೂಡಲಾರಂಭಿಸಿರುತ್ತದೆ. ಕ್ರಮೇಣ ಭಾವದ ರಭಸ ಹಿಂಗಿ ಬುದ್ಧಿಯ ಬೆಳವಣಿಗೆಯಿಂದ ವೃದ್ಧಾಪ್ಯ ದಲ್ಲಿ ಬದುಕಿನ ಕುರಿತಾದ ದೃಷ್ಟಿಯಲ್ಲಿ ನಿರ್ಲಿಪ್ತತೆ. ಗೋಚರಿ ಸುತ್ತ, ಅವಯುವಗಳಲ್ಲಿ ಶಕ್ತಿ ಉಡುಗುತ್ತ ಸಾಗುತ್ತದೆ. ಹಕ್ಕಿಯು ಮರಿಯೊಂದು ಹಾರಲು ಹವಣಿಸಿ ರೆಕ್ಕೆ ಪುಕ್ಕಗಳು ಬಲಿತುದೆ ತಡ, ವಿಶಾಲವಾದ ನೀಲಾಗಸದಲ್ಲಿ ಅವುಗಳನ್ನು ಚಾಚಿ ಸ್ವಚ್ಛಂದ ವಾಗಿ ಹಾರಾಡಿ ದಣಿದು, ಗಾಳಿಯು ಹೊಡೆತಗಳನ್ನು ತಿಂದು, ತನ್ನ ರೆಕ್ಕೆಗಳನ್ನು ಕ್ರಮೇಣ ಒಳಗೆಳೆದುಕೊಂಡು ನೆಲೆಯನ್ನರಿಸಿ ಗೂಡಿಗೆ ತೆರಳುವಂತೆ, ಮನುಷ್ಯನ ಬದುಕು ಮೂರು ಅವಸ್ಥೆ ಗಳನ್ನು ದಾಟಿ ಬದುಕಿನ ಸಿಹಿ–ಕಹಿ ನೋವು–ನಲಿವುಗಳನ್ನುಂಡು ಕೊನೆಗೆ ವಿರಮಿಸುವ ರೀತಿಗೆ ಹೋಲಿಸಬಹುದಾಗಿದೆ. ಇದರಲ್ಲಿ ತಾರುಣ್ಯಾವಸ್ಥೆಯಲ್ಲಿ ಪ್ರಕಟಗೊಳ್ಳುವದೇ ಶೃಂಗಾರ.

'ಶೃಂಗಾರ' ಎಂಬ ಶಬ್ದಕ್ಕೆ ಸಂಸ್ಕೃತದಲ್ಲಿ ಸುರತ, ನಾಟ್ಯ, ರಸ, ಆನೆಯ ಅಲಂಕಾರ, ಲವಂಗದ ಹೂವು ಇತ್ಯಾದಿ ಅರ್ಥ

ಗಳಿವೆ. ಕನ್ನಡದಲ್ಲಿ ಶೃಂಗಾರವೆಂದರೆ ಅಲಂಕಾರವೆಂದೂ ಅರ್ಥವುಂಟು. ಶೃಂಗಾರವೆಂದರೆ ಕೆಲವರು ಸ್ತ್ರೀಪುರುಷರ ಕಾಮಕಲಾಪವೆಂದೂ ಭಾವಿಸುತ್ತಾರೆ. ಆದರೆ ಅದು ಸರಿಯಲ್ಲ. ಲೌಕಿಕ ಜೀವನದಲ್ಲಿ ಕಾಣಿಸಿಕೊಳ್ಳುವ ಕಾಮ ಪ್ರೇಮಗಳು ಸಾಹಿತ್ಯದಲ್ಲಿ 'ಶೃಂಗಾರ ರಸ'ವಾಗಿ ಪರಿಣಮಿಸುತ್ತವೆ.೧ 'ಶೃಂಗಾರ'ವೆಂದರೆ "ಗೆಲುವಾಗಿರುವ ಸುಖಮಯ ಪ್ರವೃತ್ತಿ" ಎಂದೂ ಹೇಳಲಾಗಿದೆ.

೨. ಶೃಂಗಾರದ ಸಾಮಾನ್ಯ ಸ್ವರೂಪ

ಶೃಂಗಾರಕ್ಕೆ ಮಾನವ ಜೀವನದಲ್ಲಿ ಮಹತ್ವದ ಸ್ಥಾನವಿದೆ. ಸಂತಾನೋತ್ಪತ್ತಿ, ಕೌಟುಂಬಿಕ ಜೀವನದ ಮೂಲಕಾರಣ ಹಾಗೂ ಅತ್ಯಂತ ಪ್ರಬಲವಾದ ಸಂವೇದನೆಯಾದ ಪ್ರಣಯ ಆಪ್ಯಾಯಮಾನವಾದದ್ದು, ಅಷ್ಟೇ ಗಾಢವಾದದ್ದು. ಅಂತೆಯೇ ಸಾಹಿತ್ಯದಲ್ಲಿಯೂ ಶೃಂಗಾರಕ್ಕೆ ಪ್ರಾಮುಖ್ಯತೆಯಿದೆ. ನವರಸಗಳಲ್ಲಿ ಇದರ ಅಭಿವ್ಯಕ್ತಿಯೆ ಬಹುಪಾಲನ್ನು ಆಕ್ರಮಿಸಿಕೊಂಡಿದೆ. ಶೃಂಗಾರಕ್ಕೆ ಮೂಲ ರತಿಭಾವ. ಸಾಹಿತ್ಯದಲ್ಲಿ ರತಿಭಾವ ರಸವಾಗಿ ಎರಡು ರೀತಿಗಳಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ೧) ಸಂಭೋಗ ಶೃಂಗಾರ ಹಾಗೂ ೨) ವಿಪ್ರಲಂಭ ಶೃಂಗಾರ. ಪರಸ್ಪರ ಒಲಿದ ಹೃದಯಗಳು ಹತ್ತಿರಿದ್ದು ಹೊಂದುವ ಸುಖ-ಸಂತೋಷದ ಚಿತ್ರಣ ಸಂಭೋಗ ಶೃಂಗಾರದ್ದು. ವಿಪ್ರಲಂಭ

೧. ನೋಡಿ—ಡಾ. ಕೆ. ಕೃಷ್ಣಮೂರ್ತಿ : ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರರಸ, ಪುಟ ೧-೩.

ಶೃಂಗಾರದಲ್ಲಿ ಕಾರಣಾಂತರಗಳಿಂದ ಪ್ರಣಯಿಗಳು ಅಗಲಿ ದೂರ ವಿದ್ದು ಪರಸ್ಪರ ಮಿಲನಕ್ಕಾಗಿ ಕಾತರಿಸುವ, ಕಳಕಳಿಸುವ, ವಿರಹ–ಉನ್ಮಾದದ ಚಿತ್ರಣವಿರುತ್ತದೆ. ವಿಪ್ರಲಂಭ ಶೃಂಗಾರದಲ್ಲಿ ಆಯೋಗ ವಿಯೋಗವೆಂಬ ಮತ್ತೆರಡು ಭೇದಗಳಿವೆ. ಆಯೋಗ ದಲ್ಲಿ ಅಗಲಿದ ಪ್ರಣಯಿಯನ್ನು ಮತ್ತೆ ಸೇರುವ ಭರವಸೆಯಿದ್ದರೆ ವಿಯೋಗದಲ್ಲಿ ಅಗಲಿಕೆ ಶಾಶ್ವತವಾದದ್ದು. ಆಯೋಗದಲ್ಲಿ ಪ್ರೇಮಿ ತನ್ನ ಪ್ರಣಯಿಯಿಂದ ಅಗಲಿ ವಿಸ್ಮಯ, ಆನಂದ, ಚಿಂತೆ, ಸ್ಮೃತಿ, ಉನ್ಮಾದ, ಜಡತೆ, ಉದ್ವೇಗ ಇತ್ಯಾದಿಗಳನ್ನು ಅನುಭವಿಸುವನು. ಈ ಹಿನ್ನೆಲೆಯೊಂದಿಗೆ ಜನಪದ ಗೀತಗಳಲ್ಲಿ ನಿರೂಪಣೆಗೊಂಡ ಪ್ರಣಯ ಚಿತ್ರಣವನ್ನು ಪರಿಭಾವಿಸಬಹು ದಾಗಿದೆ.

ಜನಪದರ ಜೀವನ ಕ್ರಮ ರೀತಿನೀತಿಗಳು ನಾಗರಿಕರಿಗಿಂತ ಭಿನ್ನವಾದುವು. ಸಹಜತೆ, ಸ್ವಾಭಾವಿಕತೆ, ನಿಸ್ಸಂಕೋಚತೆಯ ರೀತಿ ಜನಪದರಲ್ಲಿ ಕಂಡರೆ ನಾಗರಿಕರಲ್ಲಿ ಸಂಯಮ, ಸಂಕೋಚ, ಶಿಷ್ಟಾಚಾರಗಳನ್ನು ಕಾಣುತ್ತೇವೆ. ನಿಸರ್ಗದೊಂದಿಗೆ ತೀರ ಹತ್ತಿರವಾಗಿ ಒಂದಾಗಿ ಬೆರೆತು ಬಾಳುವ ಅಕೃತ್ರಿಮ ರೀತಿ, ಬದುಕಿನ ಮೂಲ ಪ್ರವೃತ್ತಿಗಳಿಗೆ ಮುಕ್ತವಾಗಿ ಮಿಡಿಯುವದು, ಅವುಗಳ ಒತ್ತಡಗಳಿಗೆ ಸಹಜವಾಗಿ ಒಳಗಾಗುವುದು, ಅಷ್ಟೇ ತೀವ್ರವಾಗಿ ಪ್ರತಿಕ್ರಿಯಿಸುವುದು ಜನಪದರ ಜೀವನ ಕ್ರಮ. ಅವರು ಆಡಿದ್ದು, ಹಾಡಿದ್ದು, ಸಹಜವಾಗಿ ಅವರಿಗರಿವಿಲ್ಲದೆ ಸಾಹಿತ್ಯದ ನೆಲೆಗೇರುವುದು. ಹೀಗಾಗಿ ಅವರ ಸಾಹಿತ್ಯಕ್ಕೂ ಬದುಕಿಗೂ ನಡುವೆ ಕಂದರ ಕಾಣುವುದಿಲ್ಲ. ಜನಪದ ಸಾಹಿತ್ಯ ದಲ್ಲಿ ಈ ನಿಸ್ಸಂಕೋಚತೆ, ಅನುಭವ–ಅಭಿವ್ಯಕ್ತಿಗಳ ತಾಜಾತನ,

ಸರಳತೆ, ಸೊಬಗುಗಳು ಎದ್ದು ತೋರುತ್ತವೆ. ಅಭಿವ್ಯಕ್ತಿಯಲ್ಲಿ ಸಾಂಕೇತಿಕತೆ ಕಾಣಿಸಿದರೂ ವಾಚ್ಯತೆ, ನೇರತನ, ಪುನರಾವೃತ್ತಿ, ಹಸಿಬಿಸಿತನಗಳೂ ತೋರುತ್ತವೆ. ತನ್ನೆಲ್ಲ ಇತಿಮಿತಿಗಳ ನಡುವೆಯೂ ಜನಪದ ಸಾಹಿತ್ಯ ಶಿಷ್ಟ ಸಾಹಿತ್ಯಕ್ಕಿಂತ ಸಹೃದಯರಿಗೆ ಹೆಚ್ಚು ಹತ್ತಿರವಾಗುವುದು– ಅದರ ಅಕೃತ್ರಿಮತೆಯಿಂದ ಹೃದಯದಿಂದ ಬಂದದ್ದು ನೇರವಾಗಿ ಹೃದಯಕ್ಕೆ ಮುಟ್ಟುತ್ತದೆ. ಪ್ರಣಯದಂಥ ತೀರಾ ಖಾಸಗಿಯಾದ, ಗಾಢವಾದ ಸಂವೇದನೆಯ ಅಭಿವ್ಯಕ್ತಿಯಲ್ಲಿಯೂ ಯಾವುದೇ ಮುಚ್ಚುಮರೆ, ಸಂಕೋಚಗಳು ಅಡ್ಡ ಬರುವದಿಲ್ಲ. ಅದು ಅನುಭವಿಸಿದಷ್ಟೇ ತೀವ್ರವಾದ ಅಭಿವ್ಯಕ್ತಿ ರೂಪವನ್ನು ತಾಳುತ್ತದೆ.

ಜನಪದ ಸಾಹಿತ್ಯದಲ್ಲಿ ವ್ಯಕ್ತವಾದ ಪ್ರಣಯ ಚಿತ್ರಣದಲ್ಲಿ ಡಾ. ಸಿ. ಪಿ. ಕೆಯವರು ಮೂರು ಮುಖ್ಯ ಅಂಶಗಳನ್ನು ಗುರುತಿಸಿದ್ದಾರೆ.[೧] ೧) ಸಂವೇದನೆಯ ತೀವ್ರತೆ ೨) ಅಭಿವ್ಯಕ್ತಿಯ ಸಾಂಕೇತಿಕತೆ, ಹಾಗೂ ೩) ಸಂಕೀರ್ಣತೆ ಪ್ರಣಯ ಚಿತ್ರಣ ಬಿಚ್ಚು ಬಗೆಯದಾಗಿರುವದರಿಂದ ಶಿಷ್ಟರಿಗೆ ಅದು ಅಶ್ಲೀಲವೆಂಬಂತೆ ತೋರಬಹುದಾದರೂ ಅದನ್ನು ಅಶ್ಲೀಲವೆನ್ನಲಿಕ್ಕಾಗದು. ಅಲ್ಲಿ ನೀತಿ–ಅನೀತಿಗಳ ಪ್ರಶ್ನೆ ಗೌಣವಾಗುವದೂ ಉಂಟು. ಜನಪದ ಗೀತಗಳಲ್ಲಿ ನಿರೂಪಣೆಗೊಂಡ ಶೃಂಗಾರವನ್ನು ವಿವಾಹಪೂರ್ವ, ವೈವಾಹಿಕ ಹಾಗೂ ವಿವಾಹ ಬಾಹಿರ ಎಂದು ಮೂರು ಮುಖ್ಯ ಹಂತಗಳಲ್ಲಿ ವಿಶ್ಲೇಷಿಸಬಹುದಾಗಿದೆ.

---

೧. ಡಾ. ಸಿ. ಪಿ. ಕೆ. : ಜನಪದ ಶೃಂಗಾರ, ಉದಯವಾಣಿ ದೀಪಾವಳಿ ವಿಶೇಷಾಂಕ ೧೯೮೨, ಪುಟ ೨೧೯.

೩. ವಿವಾಹ ಪೂರ್ವ ಶೃಂಗಾರ

ವಿವಾಹ ಪೂರ್ವ ಪ್ರಣಯ ಸಾಮಾಜಿಕವಾಗಿ ನಮ್ಮಲ್ಲಿ ಪುರಸ್ಕೃತವಲ್ಲ. ಪಾಶ್ಚಿಮಾತ್ಯರಲ್ಲಿ ಇದು ಪ್ರಚಲಿತವಾದರೂ ನಮ್ಮಲ್ಲಿ ಅದಕ್ಕೆ ಮನ್ನಣೆ ಇಲ್ಲ. ಹೀಗಾಗಿ ಶಿಷ್ಟಸಾಹಿತ್ಯದಲ್ಲಿ ವಿವಾಹಪೂರ್ವ ಪ್ರಣಯ ಚಿತ್ರಣವನ್ನು ನಾವು ಕಾಣುವದಿಲ್ಲ. ಆದರೆ ಜನಪದ ಸಾಹಿತ್ಯದಲ್ಲಿ ಇಂಥ ಚಿತ್ರಣ ಕಾಣಲು ಸಿಗುವುದುಂಟು. ಆದರೂ ವ್ಯಕ್ತಿಗತ ನೆಲೆಯಲ್ಲಿಯೆ ಇಂಥ ಪ್ರಣಯ ಪ್ರಸಂಗಗಳು ನಡೆದು ಅವು ಆದಷ್ಟು ರಹಸ್ಯವಾಗಿದ್ದು ಕೊನೆಗೆ ಪ್ರಕಟಗೊಂಡಾಗ ಸಾಮಾಜಿಕ ನಿರ್ಬಂಧನೆಗಳಿಂದಾಗಿಯೊ ವೈಯಕ್ತಿಕ ಕಾರಣಗಳಿಂದಾಗಿಯೋ ವೈವಾಹಿಕ ಮಟ್ಟವನ್ನು ಮುಟ್ಟದೆ ಹೋಗುವುದೇ ಹೆಚ್ಚು. ಹೀಗಾಗಿ ಭಗ್ನ ಪ್ರಣಯದ ಚಿತ್ರಣಗಳೂ ಜನಪದ ಸಾಹಿತ್ಯದಲ್ಲಿ ಹೇರಳವಾಗಿ ದೊರೆಯುತ್ತವೆ.

ಜನಪದ ಜೀವನ ಪರಸ್ಪರಾವಲಂಬನೆ ಸಹಕಾರ-ಸಹಯೋಗಗಳಿಂದ ಕೂಡಿದ್ದು. ಒಂದೊಂದು ಹಳ್ಳಿಯೂ ಒಂದೊಂದು ಕುಟುಂಬದಂತೆ ಬದುಕುವುದು ಉಂಟು. ಪರಸ್ಪರ ಪ್ರಾಥಮಿಕ ಸಂಬಂಧಗಳು ಏರ್ಪಡುವದರಿಂದ ಪರಸ್ಪರ ಭೇಟಿ, ಮಾತುಕತೆಗಳು ಸಹಜವಾಗಿ ನಡೆಯುತ್ತವೆ. ಹೊಲದಲ್ಲಿ ದುಡಿಯುವಾಗ, ಊರಬಾವಿಯಿಂದ ನೀರು ತರುವಾಗ, ಹಬ್ಬ-ಹುಣ್ಣಿಮೆ ಜಾತ್ರೆ ಮತ್ತಿತರ ಉತ್ಸವಾದಿಗಳಲ್ಲಿ ಪಾಲ್ಗೊಂಡಾಗ ಪ್ರಾಪ್ತ ವಯಸ್ಕರಾದ ಗಂಡು ಹೆಣ್ಣು ಒಬ್ಬರನ್ನೊಬ್ಬರು ಕಾಣುವ ಭೇಟಿಯಾಗುವ ಸಂದರ್ಭ ಸನ್ನಿವೇಶಗಳು ಹತ್ತು ಹಲವು. ರಮ್ಯ ಪ್ರಕೃತಿಯ ಹಿನ್ನೆಲೆ, ತಾರುಣ್ಯದ ಅಂಗಾಂಗ

ಲಾವಣ್ಯ, ನಿಸರ್ಗ ಸಹಜ ಪರಸ್ಪರ ಆಕರ್ಷಣೆಗಳು ಪ್ರಣಯ ಭಾವ ವಿಕಾಸಕ್ಕೆ ಸಹಕಾರಿ ಅಂಶಗಳು. ಬಾಲ್ಯದಿಂದಲೇ ಮಕ್ಕಳು ದೊಡ್ಡವರನ್ನು ಅನುಕರಿಸಿ ಗಂಡ-ಹೆಂಡತಿಯರಾಗಿ ಆಡುವ ಆಟಗಳು, ಆಗಾಗ ಹಬ್ಬ-ಹುಣ್ಣಿವೆ ಜಾತ್ರೆ ಮತ್ತಿತರ ಸಂದರ್ಭ ಗಳಲ್ಲಿ ಒಂದೆಡೆ ಸೇರುವ ಸಂಬಂಧಿಕರು, ಆಗಾಗ ಬರಹೋಗುವ ಅಕ್ಕನ ಮಗಳು, ಮಾವನ ಮಗಳು, ಅಕ್ಕನ ಮಗಳನ್ನು ತನ್ನ ಮಗನಿಗೆ ತಂದು ಕೊಳ್ಳಬೇಕೆನ್ನುವ ತಂದೆ, ಅಣ್ಣನ ಮಗಳನ್ನು ತಂದುಕೊಳ್ಳಬೇಕೆನ್ನುವ ತಾಯಿ, ಈ ರೀತಿಯಲ್ಲಿ ಪರಸ್ಪರ, ಮಕ್ಕಳಲ್ಲಿ ಸಂಬಂಧಗಳನ್ನು ಕಲ್ಪಿಸಿ ಮಾಡುವ ವಿನೋದಗಳು ಪ್ರಣಯ ಭಾವ ಜಾಗೃತಿಗೆ ಪೋಷಕವಾಗುತ್ತವೆ.

ಯುವಕ-ಯುವತಿಯರನ್ನು ಮೊದಲ ನೋಟಕ್ಕೆ ಮನ-ಸೋಲುವಂತೆ ಮಾಡುವುದು-ಅವರ ಮೈಮಾಟ ಹಾಗೂ ರೂಪ ಲಾವಣ್ಯಗಳು. ಓರ್ವ ಬಾಲೆಗೆ ಮನಸೋತ ಚೆನ್ನಿಗ ಆಕೆಯಲ್ಲಿ ತನಗುಂಟಾದ ಪ್ರೀತಿಯನ್ನು ಈ ರೀತಿ ತೋಡಿಕೊಳ್ಳುತ್ತಾನೆ :

ನಿಂಬೀಯ ಹಣ್ಣಿನಂಗ ತುಂಬಿತ್ತ ಮೈಬಣ್ಣ
ಹಂಬಾಲ ಬಿತ್ತ ನಿನಮ್ಯಾಲೆ । ಎಲೆ ಹೆಣ್ಣ
ನಂಬಿ ಬಂದೇನ ಮನಿತನಕ ।

ಪ್ರಣಯ ಪ್ರಸ್ತಾಪದಲ್ಲಿ ಆತನದು ನೇರ ನುಡಿ. ಅಲ್ಲಿ ಆತನಿಗೆ ಸಂಕೋಚ ಅಡ್ಡಿ ಬರುವುದಿಲ್ಲ. ನಾಗರಿಕ ರೀತಿಯ ಪ್ರಣಯ ಪತ್ರಗಳ ವಿನಿಮಯವಾಗಲಿ, ಪರ್ಯಾಯ ಸೂಚನೆಯಾಗಲಿ ಅವನದಲ್ಲ. ಅದನ್ನು ಸಂಕೋಚದಿಂದಾಗಿ ಅಡಗಿಸಿಡುವುದು ಅವನಿಗಾಗದು. ಅವಳಲ್ಲಿ ಅವನಿಗೆ ಅನುರಾಗವುಂಟಾಗಿರುವದ

ರಿಂದ ಅವಳನ್ನು ಕಾಣದಿರುವುದು ಕಸಿವಿಸಿಯನ್ನುಂಟು ಮಾಡು ವುದರಿಂದ ಆತ ಓಡಿ ಬರುತ್ತಾನೆ.

ಅಡ್ಡಗುಡ್ಡವ ದಾಟಿ ಕದ್ದು ಕಣಿವೆಯ ದಾಟಿ
ಬಿದ್ದೋಡಿ ಬಂದೆ ನಿನಗಾಗಿ । ಎಲೆ ಹುಡಿಗಿ
ಎದ್ದು ದನಿದೋರ ನನಗಾಗಿ

ಈ ವಿಷಯದಲ್ಲಿಯ ಆತನ ಪ್ರಯತ್ನ ಅವನ ತೀವ್ರವಾದ ಭಾವಾವೇಗಕ್ಕೆ ನಿದರ್ಶನ.

ಸ್ವಭಾವತಃ ಕೋಮಲೆಯೂ ಸಂಕೋಚ ಸ್ವಭಾವದವ ಳಾದ ಹೆಣ್ಣು ಪ್ರಣಯ ಪ್ರಸಂಗದಲ್ಲಿ ತನ್ನ ಮನೋಭಿಷ್ಟವನ್ನು ಸೂಚಿಸುವಲ್ಲಿ ಅವಳಿಗೂ ಹಿಂದೇಟು ಹಾಕುವದು ಆಗದು. ಆಕೆ ಯಾದರೂ ಮನಸಾರೆ ಮೆಚ್ಚಿದ ತನ್ನಿನಿಯನನ್ನು ದಾರಿಯಲ್ಲಿಯೆ ತಡೆದು ಕೇಳುವ ಧೈರ್ಯವಂತೆ :

ಕ್ವಾರಿ ಮೀಸಿಯ ತಿದ್ದಿ ನೀರಿಗೆ ಹೋಗುವಾಗ
ದಾರ‍್ಯಾಗ ಕಂಡೆ ಚಲುವನ್ನ । ಮನಸಾಗಿ
ವಾರ‍್ಯಾಗ ತರುಬಿ ಕೇಳೇನ ।

ಹದಿ ವಯಸ್ಸಿನ ಪ್ರಣಯ ವ್ಯವಹಾರ ತುಂಬ ರೋಚಕ. ದುಡುಕು, ಭಾವುಕತೆ, ಮುಗ್ಧತೆ, ಚಾಂಚಲ್ಯಗಳು ಸಾಮಾನ್ಯ. ಅಂಥ ಒಂದು ಚಿತ್ರವಿದು.

ಪತ್ತಲ ಉಡವೂಳ ಹಿತ್ಲಾಗ ನಿಂದರೂಳ
ನತ್ತ ನಲನಲಗಿಸಿ ನಗವೂಳ । ಹುಡುಗಿ ಕಂಡ
ಹಿತ್ತಲ ಗ್ವಾಡಿ ಜಿಗಿದಾನ ।

ಪ್ರಿಯತಮೆಯ ದರ್ಶನಕ್ಕಾಗಿ ತುಡಿದು ತೀವ್ರಗತಿಯಲ್ಲಿ ಹೊರಟ ಅವನಿಗೆ ಅಡ್ಡ ಬಂದ ಗೋಡೆ ಅಡ್ಡಿಯಾಗುವದಿಲ್ಲ. ಅದನ್ನು ಅತ ಸಲೀಸಾಗಿ ಹಾರುತ್ತಾನೆ. ಅವನ ಈ 'ಸಾಹಸ' ವನ್ನು ಕಂಡ ಆಕೆಗೆ ಎಲ್ಲಿ ಅಪಾಯವಾದೀತೋ ಎನ್ನುವ ಭಯ. ಅದಕ್ಕಾಗಿ ಅವಳು ಎಚ್ಚರಿಸಿ ವಿವೇಕ ಹೇಳುತ್ತಾಳೆ :

ಹಿತ್ತಲ ಜಿಗಿಬ್ಯಾಡ ಕೈಮುಂಡಿ ಮುರದಾವ
ಸುತ್ತಾಗಿ ಬಾರೊ ಸುಬೆದಾರ । ನನ್ನೊಳ್ಗ್ರತ
ಮತ್ಯಾರು ಇಲ್ಲ ಮನಿಯಾಗ ।

ಗಂಡಿನ ದುಡುಕು, ಹೆಣ್ಣಿನ ಸಂಯಮದ, ಎಚ್ಚರದ ಧೋರಣೆ ಗಳಿಲ್ಲಿ ಸ್ಪಷ್ಟ. ಆದರೆ ಅವಳು ಕೂಡ ಪ್ರಣಯ ತೀವ್ರತೆಗೊಳ ಗಾದಾಗ ಅವಳ ನಡವಳಿಕೆಯಲ್ಲಿಯೂ ಅಂತಹದು ಕಾಣುತ್ತದೆ.

ಬಂಗಾರ ಬಾವುಲಿ, ಬಲಕ ಹಾಕಿದ ಚೌಕ
ಎರಕ ಹೋದಂತ ಎಳಿ ಹುಡುಗನ । ಸಲುವಾಗಿ
ಎರಕೊಳ್ಳುವುದ ಬಿಟ್ಟು ಬಂದಾಳ ।

ಇಲ್ಲಿರುವ ಭಾವ ತೀವ್ರತೆ, ಅದರ ಹಿನ್ನೆಲೆಯಲ್ಲಿರುವ ತವಕ-ತುಡಿತಗಳು ಯಾರಿಗೂ ಅರ್ಥವಾಗುವಂಥಾದ್ದು.

ಗಂಡು ಹೆಣ್ಣಿಗೆ ನಾಟಕೀಯವಾಗಿ ಪ್ರಶ್ನಿಸುತ್ತ, ಅವಳ ಗಮನ ಸೆಳೆದು ಒಲಿಸಿಕೊಳ್ಳುವ ರೀತಿ ಇಲ್ಲಿದೆ.

ಕಗ್ಗಲ್ಲ ಕಣಿವೇಲಿ ಇಬ್ಬರು ಬರುವಾಗ
ತಬ್ಬಿದರೇನಾಗೋದೇ । ಎಲೆನಾರಿ
ಒತ್ತಿದರೇನಾಗೋದೇ । ಎಲೆನಾರಿ

ಮುಟ್ಟಿದರೇನಾಗೋದೇ । ಎಲೆನಾರಿ
ಮಾತಿನಿಂದೇನಾಗೋದೇ । ಎಲೆನಾರಿ
ಮಲಗಿದರೇನಾಗೋದೇ ।

'ಏನಾಗೋದೆ' ಎಂದು ಮತ್ತೆ ಮತ್ತೆ ಪ್ರಶ್ನಿಸುವ ರೀತಿ ಕುತೂಹಲಕರ ಹಾಗೂ ಅಷ್ಟೇ ತುಂಟತನದ್ದು.

ತರುಣಿಯೊಬ್ಬಳು ಒಂಟಿತನದ ಬಾಧೆ ತಾಳದೆ ತನ್ನ ನಲ್ಲನನ್ನು ಆಹ್ವಾನಿಸುವ ರೀತಿಯಲ್ಲಿ ವಿರಹೋತ್ಕಟತೆಯಿದೆ.

ಹಾಸಿಗೆ ಹಾಸಿವ್ನಿ ಬಾರನಾ ನಲ್ಲರ ಜಾಣ
ಜ್ಯೋತಿಯು ತಂದ್ದುಚ್ಚಿವ್ನಿ ಬಾರನಾ ನಲ್ಲರ ಜಾಣ
ಹಾಸಿಗೆಗೆ ತಕ್ಕ ಪುರುಷರಿಲ್ಲದ ಮೇಲೆ
ನಾ ಪರದೇಶಿಯೊಬ್ಬಳಿ ಬಾರನಾ
ಹನ್ನೆರಡು ವರುಷವಾಯ್ತು ಬಾರನಾ ನಲ್ಲರ ಜಾಣ
ನಾ ಕನ್ನೆ ಮೈನೆರೆದಿವ್ನಿ ಬಾರನಾ
ಇಂಥ ಇಬ್ಬನಿ ಸಳಿ[೧]ಯೊಳಗೆ ಬಾರನಾ
ನಾನೊಬ್ಬಳಿ ಇರಲಾರೆ ಬಾರನಾ ನಲ್ಲರಜಾಣ
ತಬ್ಬಿ ಮಲಗುವ ಸುಗುಣ ಬಾರನಾ ।

ಪದ್ಯ ವಾಚ್ಯವಾಗಿದ್ದರೂ ಅವಳ ಮೈಮನಸ್ಸುಗಳನ್ನಾವರಿಸಿ ಕಾಡುವ ಶೃಂಗಾರದ ಶಕ್ತ ಅಭಿವ್ಯಕ್ತಿ ಇಲ್ಲಿದೆ.

ಯುವತಿಯೊಬ್ಬಳು ಪ್ರಣಯದ ಭಾವೋನ್ಮಾದದಲ್ಲಿ ಇನಿಯನಿಗೆ ಹೇಳುವ ಮಾತಿದು:

---

೧ ಸಳಿ = ಚಳಿ

ಹೊಳೆಯ ದಡದಲಿ ಮನೆಯ ಕಟ್ಟೋಣ ಸುಮಾನಗಾರ
ಹೊಳೆಯು ಬಂದರೆ ತೇಲಿ ಹೋಗೋಣ ।

ಪ್ರೀತಿಯು ಎಂಥ ತ್ಯಾಗಕ್ಕೂ ಪ್ರೇಮಿಗಳನ್ನು ಸಿದ್ಧಮಾಡುತ್ತ ದೆಂಬುದರ ಸ್ಪಷ್ಟ ಚಿತ್ರಣವನ್ನು ಈಕೆಯ ಮಾತುಗಳಲ್ಲಿ ಮನ ಗಾಣಬಹುದಾಗಿದೆ.

ಜಾತ್ರೆಯಲ್ಲಿ ತನ್ನ ಪ್ರಿಯತಮನನ್ನು ಕಂಡು ಅವನಿಗೆ ಪ್ರೀತಿಯಿಂದ ತಿನ್ನಿಸಲು ಕೈಯಾರೆ ಮಾಡಿದ ಕರಿಗಡಬುಗಳನ್ನು ಕಟ್ಟಿಕೊಂಡು ಜಾತ್ರೆಯಲ್ಲಿ ಹುಡುಕುತ್ತಿದ್ದಾಳೆ.

ಜಾತರಿಗ್ಹೋಗುದಕ ರಾತರೇಲಿ ಎದ್ದು
ಧೋತರದ ತುಂಬ ಕರಿಗಡಬ ।ಕಟಗೊಂಡು
ಜಾತಜಾತರಿ ಹುಡುಕ್ಯಾಳ।

ಆತ ಸಿಕ್ಕೊಡನೆ ಆನಂದಾತಿಶಯದಿಂದ ಕೆರೆಯ ದಂಡೆಯಮೇಲೆ ಆತನೊಂದಿಗೆ ಕುಳಿತು ತಿನ್ನಿಸುವ ಚಿತ್ರವಿದು;

ಕರದ ಕರಚಿಯಕಾಯಿ ಕರಿಅರಿವ್ಯಾಗ ಕಟ್ಕೊಂಡ
ಎರಿಯ ಯಮನೂರ ಕೆರಿವ್ಯಾಗ । ಆ ಹುಡಿಗಿ
ಸೆರಗ ಮರಿ ಮಾಡಿ ತಿನಿಸ್ಯಾಳ।

ತನ್ನ ನಲ್ಲನಿಗೆಲ್ಲಿ ದೃಷ್ಟಿಯಾದೀತೆಂದು 'ಸೆರಗ ಮರಿಮಾಡಿ' ತಿನ್ನಿಸುವಲ್ಲಿ ಕಾವ್ಯ ಹನಿಯೊಡೆಯುತ್ತದೆ.

ತರುಣನೊಬ್ಬ ತಾನು ಬೆಳೆದ ತೊಗರಿಯನ್ನು ಮಾರಾಟ ಮಾಡಲು ಪೇಟೆಗೆ ಹೋಗಿದ್ದಾನೆ. ಒಬ್ಬ ಸುಂದರ ಯುವ

ತಿಯು ಒನಪು–ಒಯ್ಯಾರಕ್ಕೆ ಮಾರುಹೋಗಿ 'ಮರುಳಾದ' ಸ್ವಾರಸ್ಯಪೂರ್ಣ ಚಿತ್ರಣವಿಲ್ಲಿದೆ;

ಮಧುರ ಮಾತಿನ ಚೆದುರಿ ಯಾವ ಊರವಳಿವಳ
ನದರಿಗೆ ಬಿದ್ದಾಳೊ ಸಂತ್ಯಾಗ ॥ಪಲ್ಲವಿ॥
ಇವರಿಗೆ ನಿಂತs ನೋಡಿ ನನ್ನ
ಸದರ ಸುದ್ದs ಮಾತನಾಡಿ
ಬೆದರಿದೆರಳೀನೋಟದಂತೆ ಕಣ್ಣಾ
ಅದರ ಸುದ್ದs ದೀಪದಂತೆ ಕೆಂಪು ತೊಂಡಿ ಹಣ್ಣಾ
ರೂಪನೋಡಿ ತಾಪವೇರಿ ಗಪ್ಪನೇತ್ರ ಮುಚ್ಚಿದವು
ಟೋಪಿನ ಸೀರೀ ಸೆರಗs ಸರಿಸೀ ನನ್ನಾ
ಈ ಪರಿ ಮಳ್ಳಮಾಡಿ ಬಿಟ್ಟಾಳಪ್ಪಾ ತಾನಾ.......
ನದರಿಗೆ ಬಿದ್ದಾಳೊ
ನದರಿಗೆ ಬಿದ್ದಾಳೊ ಸಂತ್ಯಾಗ ಹೊಯ್ಯಾಲಿ ಕಂಡ
ತೊಗರಿಯ ಲೆಕ್ಕ ಕಳಕೊಂಡ್ನೋ।

ಪ್ರಣಯ ಪ್ರಸಂಗಗಳಲ್ಲಿ ಗೆಲುವಿನಂತೆ ಸೋಲೂ ಉಂಟು; ಸೋಲೆ ಹೆಚ್ಚು ಎಂದರೂ ತಪ್ಪಿಲ್ಲ. ಪ್ರಣಯ ಫಲಿಸದಂತೆ ಅಡ್ಡಿಯಾಗುವ ಆತಂಕಗಳು ಅನೇಕ– ಅಂತಸ್ತು, ಜಾತಿ, ಪ್ರತಿಷ್ಠೆ, ಸಾಮಾಜಿಕ ವಿಧಿನಿಷೇಧಗಳು ಇತ್ಯಾದಿ. ಅಂಥ ಸಂದರ್ಭಗಳಲ್ಲಿ ಭಗ್ನಪ್ರಣಯದ ಆಘಾತ, ವೇದನೆ, ಪರಿತಾಪಗಳು ಅನಿವಾರ್ಯ. ಪ್ರಣಯಿಗಳಿಗೆ ತೀವ್ರವಾದ ಈ ನೋವು ತಲ್ಲಣಿಸಿಬಿಡುತ್ತದೆ. ಆಗ ಪ್ರಣಯದ ಭಾವನಾಲೋಕದಿಂದ ಇಳಿದು ವಾಸ್ತವದ ಕಾಠಿಣ್ಯಕ್ಕೆ ಎದೆಗೊಡಬೇಕಾಗುತ್ತದೆ. ಅಂಥ ಯುವತಿಯೊಬ್ಬಳ ನೋವು ಈ ಪರಿಯಾದದ್ದು;

ಗೆಣೆಯನ್ನ ಕಳಕೊಂಡು ಒಣಮಾರಿ ಮಾಡ್ಕೊಂಡು
ಮಣಮಣಿಸಿ ಊರ ತಿರಿಗ್ಯಾಳೊ। ಅಗಸ್ಯಾಗ
ಹಣೆಹಣೆ ಬಡೆದು ಅಳತಾಳೊ।

ತನ್ನ ಗೆಳೆಯನಿಂದ ವಂಚಿತಳಾದ ಆಕೆ ಒಣಮಾರಿ ಮಾಡಿಕೊಂಡು ಅತ್ಯಂತ ನಿರಾಸೆ-ನೋವುಗಳಿಂದ ತಿರುತಿರುಗಿ ತನ್ನ ಸರ್ವಸ್ವವೇ ಇಲ್ಲವಾಯಿತೆನ್ನುವಂತೆ ಅಗಸಿಯಲ್ಲಿ-ಊರ ಹೆಬ್ಬಾಗಿಲಲ್ಲಿ-ಕುಳಿತು 'ಹಣೆಹಣೆ' ಬಡಿದುಕೊಂಡು ಅಳುವ ಚಿತ್ರ ಹೃದಯವೇಧಕವಾದದ್ದು.

ಗೆಣೆಯ ಬಿಟ್ಟರೂ ಕೂಡ ಗೆಣೆಯನಾಡಿದ ಆಟ
ಮನದಾಗ ಊರಿ ನಿಂತ್ಹಾಂಗ। ಆ ಹುಡುಗಿ
ಚಣಚಣಕ ನೆನೆಸಿ ಅಳತಾಳೊ।

ಗೆಳೆಯ ಆಕೆಯನ್ನು ಬಿಟ್ಟಿರುವ ಕಾರಣ ತಿಳಿದಿಲ್ಲವಾದರೂ ಅದರಿಂದ ಅವಳ ಮನಸ್ಸಿನ ಮೇಲಾಗುವ ತೀವ್ರ ಪರಿಣಾಮ ಹಾಗೂ ಆಕೆ ತಲುಪಿರುವ ಸಂಭ್ರಾಂತ ಸ್ಥಿತಿಗಳು ಶಕ್ತವಾದ ಅಭಿವ್ಯಕ್ತಿಯನ್ನು ಪಡೆದಿವೆ. ಇನ್ನೊಬ್ಬಾಕೆ ಭಗ್ನ ಪ್ರಣಯ ಅಲ್ಲವಾದರೂ ನಲ್ಲನ ಕಾಣದೇ ಕಳವಳಿಸುತ್ತಿದ್ದಾಳೆ :

ನಲ್ಲ ನಿನ್ನ ಕಾಣದಲೇ
ನಿಲ್ಲ್ಲಾವು ಕಣ್ಣೀರು।
ಯಲ್ಲರಂಗಿರುಬಾರದೇ-ನಲ್ಲ
ಯಲ್ಲರಂಗಿರುಬಾರದೇ-ಸುಗುಣ

ಬಾಳೆಯ ಹಾಕಿದೆ
ಬಾಳೆಯ ಬೆಳಸೀದೆ

ಬಾಳಲಿಲ್ಲ ಅರಗಳಿಗೇ–ನಲ್ಲ
ಬಾಳಲಿಲ್ಲ ಅರಗಳಿಗೇ–ಸುಗುಣ
ನಲ್ಲ ನಿನ್ನ ಕಾಣದಲೇ
ನಿಲ್ಲಾವು ಕಣ್ಣೀರು.

ಕಬ್ಬು ಹಾಕಿದೆ
ಕಬ್ಬು ಬೆಳೆಸಿದೆ
ಮೆಲ್ಲಲಿಲ್ಲ ಅರಗಳಿಗೇ–ನಲ್ಲ
ಮೆಲ್ಲಲಿಲ್ಲ ಅರಗಳಿಗೆ–ಸುಗುಣ
ನಲ್ಲ ನಿನ್ನ ಕಾಣದಲೇ
ನಿಲ್ಲಾವು ಕಣ್ಣೀರು।

ತನ್ನಿನಿಯನೊಂದಿಗೆ ಬದುಕಿ ಬಾಳಲಾಗದ ಅಸಹಾಯಕತೆಯನ್ನು 'ಬಾಳೆ, ಕಬ್ಬು'ಗಳ ಸಾಂಕೇತಿಕ ಮಾತುಗಳಲ್ಲಿ ಅರ್ಥಪೂರ್ಣವಾಗಿ ಹೇಳಲಾಗಿದೆ.

ಹೀಗೆ ವಿವಾಹ ಪೂರ್ವದ ನೆಲೆಯಲ್ಲಿ ಕಾಣುವ ಪ್ರಣಯ ಚಿತ್ರಣದಲ್ಲಿ ಪ್ರಣಯಿಗಳ ಭಾವೋನ್ಮಾದ, ಪರವಶತೆ, ಮುಗ್ಧತೆ, ತುಂಟತನ, ಸಂಭ್ರಮ, ನೋವು–ನಿರಾಶೆಗಳೆಲ್ಲ ಕಂಡು ಬರುವ ಏರಿಳಿತಗಳೇ. ವ್ಯಕ್ತಿಗತ ಮಟ್ಟದಲ್ಲಿ ನಡೆವ ಇಂಥ ಪ್ರಣಯ ವ್ಯವಹಾರಗಳಲ್ಲಿ ಇವೆಲ್ಲ ಸಹಜ, ಅನಿವಾರ್ಯ. ಇವುಗಳ ಸಮರ್ಥವಾದ ಅಭಿವ್ಯಕ್ತಿಯನ್ನು ಜನಪದ ಗೀತಗಳಲ್ಲಿ ನೋಡಬಹುದಾಗಿದೆ. ಗುಪ್ತ ಪ್ರಣಯ ವ್ಯವಹಾರ ಪ್ರಕಟಗೊಂಡು ಸಾಮಾಜಿಕ ಕಾರಣಗಳಿಗಾಗಿ ಪ್ರಣಯಿಗಳು ಎದುರಿಸುವ ಸಂಘರ್ಷ, ತಳಮಳದ ಚಿತ್ರವೂ ಜನಪದ ಕಾವ್ಯದಲ್ಲಿ ಕಾಣಸಿಗುತ್ತದೆ.

೪. ದಾಂಪತ್ಯ ಶೃಂಗಾರ

ದಾಂಪತ್ಯ ಶೃಂಗಾರಕ್ಕೆ ಮದುವೆಯೇ ಮೊದಲ ಮೆಟ್ಟಿಲು. ಗಂಡು–ಹೆಣ್ಣು ಪರಸ್ಪರ ಮೆಚ್ಚಿ ಕೈಹಿಡಿದು ಸತಿ ಪತಿಗಳಾಗುವ ದಾಂಪತ್ಯ ಜೀವನದಲ್ಲಿ ಶೃಂಗಾರಕ್ಕೆ ವಿಶಿಷ್ಟ ಪಾತ್ರವಿದೆ. ಅವರನ್ನು ಒಂದಾಗಿ ಬೆಸೆಯುವ, ಬದುಕು ಮಾಡಲು ಹಚ್ಚುವ ಮೂಲ ಸೂತ್ರವೇ ಅದು. ಈ ಕಾಮ–ಪ್ರೇಮಗಳು ಕೌಟುಂಬಿಕ ಜೀವನದ ಅಡಿಪಾಯ. ಬರಿಯ ಸ್ವಾರ್ಥದ ಕಾಮ ಕೌಟುಂಬಿಕ ಆವರಣದಲ್ಲಿ ತ್ಯಾಗದ ಪ್ರೇಮ ದತ್ತ ತಿರುಗಿ ಹದಗೊಳ್ಳುತ್ತದೆ; ಸತಿಪತಿಗಳ ವ್ಯಕ್ತಿತ್ವ ವಿಕಾಸಕ್ಕೆ ಹೊಸ ಬಾಗಿಲನ್ನು ತೆರೆಯುತ್ತದೆ. ದಾಂಪತ್ಯ ಜೀವನದಲ್ಲಿಯ ಸರಸ–ವಿರಸಗಳನ್ನು ಜನಪದ ಗೀತಗಳು ಅಪೂರ್ವವಾಗಿ ಬಣ್ಣಿಸುತ್ತವೆ.

ಜನಪದ ಸಾಹಿತ್ಯದ ಒಂದು ಪ್ರಕಾರವಾದ ಒಡಪುಗಳು ಹಳ್ಳಿಗರ ರಸಿಕತೆಗೆ ಹಿರಿಯ ಸಾಕ್ಷಿಗಳಾಗಿವೆ. ಸಾಂಪ್ರದಾಯಿಕ ಶುಭ ಸಮಾರಂಭಗಳಲ್ಲಿ ಒಡಪುಗಳು ಬಳಕೆಯಾಗುತ್ತವೆ. ಮದುವೆಯ ಮಂಗಲ ಪ್ರಸಂಗದ ವಿವಿಧ ಸನ್ನಿವೇಶಗಳಲ್ಲಿ—ಅರಿಷಿಣ ಹಚ್ಚಿ ಆರತಿ ಮಾಡುವಾಗ, ಕುಂಬಾರನ ಮನೆಯಿಂದ ಐರಾಣಿಗಿ ತರುವಾಗ, ಪತ್ತಾರನ ಮನೆಯಿಂದ ಮಂಗಲಸೂತ್ರ ತರುವಾಗ, ಸುರಗಿಯ ಸಾಮಾನುಗಳನ್ನು ಸ್ವೀಕರಿಸುವಾಗ, ನೂಲುಸುತ್ತುವ ಸಂದರ್ಭ, ಅಕ್ಷತಾರೋಪಣವಾದ ತರುವಾಯ—ಹೀಗೆ ಹತ್ತು ಹಲವು ಸಂದರ್ಭಗಳಲ್ಲಿ ಹೆಸರು ಕೇಳುವುದು ಹೇಳುವುದು ನಡೆಯುತ್ತದೆ. ಈ ಸಂಪ್ರದಾಯ ನವ

ದಂಪತಿಗಳಲ್ಲಿ ತೋರುವ ಸಂಕೋಚ, ನಾಚಿಕೆಗಳನ್ನು ಹೋಗಲಾಡಿಸಿ ಪರಸ್ಪರ ಪ್ರೀತಿ ವಿಶ್ವಾಸಗಳು ಹೆಚ್ಚುವಂತೆ ಮಾಡಿ ಅವರಿಬ್ಬರನ್ನು ಹೆಚ್ಚು ಹತ್ತಿರಕ್ಕೆ ತರುತ್ತದೆ. ಅಂಥ ಒಡಪುಗಳ ಕೆಲವು ಮಾದರಿಗಳನ್ನಿಲ್ಲಿ ಪರಿಭಾವಿಸಬಹುದು;

ಹೆಣ್ಣು ಮಕ್ಕಳ ಒಡಪುಗಳು :

೧) ಅಡಕಿ ತಿಂದಾನ ಕಡಕ ಆಗ್ಯಾನ
ಲಾವಂಗ ತಿಂದಾನ ಲಾಲ ಆಗ್ಯಾನ
ಹುವ್ವಿನಂತ ಹುಡುಗಿನ ಕಂಡ ಹುಬ್ಬ ಹಾರಸ್ತಾನ......

೨) ಬಾಳಿಪಟ್ಟಿ ಸೀರಿ, ಬದಾಮಿ ಬಣ್ಣದ ಕುಬಸ
ಬಾವಿ ನೀರಿಗಿ ಹ್ವಾದರ, ಬಾಯಿ ತಕ್ಕೊಂಡ
ಕುಂಡ್ರತಾನ...

೩) ಚೆಜ್ಜಿ ಬಿತ್ತ್ಯಾನ, ಚೆಲ್ಲಾಟ ಮಾಡತಾನ
ಬತ್ತಾ ಬಿತ್ತ್ಯಾನ. ಬರಾಟ ಮಾಡತಾನ
ದೀಪಾ ಆರಸತಾನ. ಧಿಮಾಕ ಮಾಡತಾನ
ಹುವ್ವಿನಂತ ಹುಡುಗಿನ ಕಂಡ, ಹುಡುಗಾಟಿಕಿ
ಮಾಡತಾನ...

೪) ಬರ್‌ಬರಾಟ ಬಂಗಾರ ತಾಟ
ಅಂವ ಬಂದ ಉಣ್ಣಾಕ, ನಾ ಹ್ವಾದಿನಿ ನೀಡಾಕ
ನತ್ತ ಬಿತ್ತ, ಪಟಕ್ ಮುದ್ದು ಕೊಟ್ಟ ಲಟಕ್

೫) ಕತ್ತೆ ಅಂತ ಬೆಯ್ಯತಾನ
ಮತ್ತ ಮುಂದಕ ಕರಿತಾನ
ಸುತ್ತ ಮುತ್ತ ನೋಡತಾನ
ಮುತ್ತ ಕೊಟ್ಟ ನಗತಾನ...

೬) ಹರಕ ಧೋತರ ಹೊಲಸ ಅಂಗಿ
ಹರದಾರಿಗೊಂದ ಕಾಲಿಟಕೊಂತ
ಹರಗಾಕ ಹೊಕ್ಕಾನ ....

೭) ನಾವ ಮಲಗತೀವ ಗಾದಿಮ್ಯಾಗ
ಹುಡುಗೋರ ಆಡತಾವ ಹಾದಿಮ್ಯಾಲ
ಹಿರ್ಯಾನ ಜಳಕ ಆಗತ್ತೈತಿ ಊಟ ಆದಮ್ಯಾಲ

ತನ್ನ ಪತಿಯ ಹೆಸರು ಹೇಳುವಲ್ಲಿ ಅವಳ 'ಗುಣಗಾನ'ವಿದು. ಅವನು ತನಗಾಗಿ ತೋರುವ ಪ್ರೀತಿ, ತುಂಟಾಟ, ಚೆಲ್ಲಾಟಗಳನ್ನು ನೆನೆಸಿಕೊಳ್ಳುತ್ತಾಳೆ. ಅದು ಅವನ ಬಗೆಗೆ ಅವಳಿಗಿರುವ 'ಅತೀವ ಪ್ರೇಮ'ದ ದ್ಯೋತಕ. ಜೊತೆಗೆ ಹಾಸ್ಯಪೂರ್ಣ ಶೈಲಿಯಲ್ಲಿ ಹೇಳುವ ರೀತಿಯೂ ಸ್ವಾರಸ್ಯಪೂರ್ಣವಾಗಿದೆ. ಹಳ್ಳಿಗರಲ್ಲಿರುವ ಶುದ್ಧ ಶೃಂಗಾರ ಪರಿಕಲ್ಪನೆಗೆ ಒಡಪುಗಳು ಉತ್ತಮ ನಿದರ್ಶನಗಳು.

ಗಂಡಸರ ಒಡಪುಗಳು :

೧) ಕರಿ ಕುದುರಿ ತಗೊಂಡ ಕರ್‍ಯಾಕ ಹ್ವಾದರ
ನೆರೆದಿಲ್ಲ ಅಂತ ನ್ಯಾಯ ಮಾಡತಾಳ.

೨) ಗಲ್ಲ ಕಡದರ ಗುಲ್ಲ ಮಾಡತಾಳ
ಸೊನ್ನಿ ಮಾಡಿದರ ಸುಮ್ಮ ಆಗತಾಳ.

೩) ಹಗ್ಗಲೆ ಬಡದರ
ಮಗ್ಗಲದಾಗ ಬರತಾಳ.

೪) ಅಂಗಳದಾಗ ನಿತ್ತಾವನ
ಅಡಗಿ ಮನಿಗಿ ಕರದ
ಮರ್‍ಯಾದಿಲೆ ಮಾತ ಹೇಳತಾಳ.

೫) ತೂತಿನ ಕೊಡ ಹೊತಕೊಂಡ
ತೂಕಡಿಸುತ ಬರತಾಳ.

ಗಂಡನ ದೃಷ್ಟಿಯಲ್ಲಿ ಹೆಂಡತಿಯ ಗುಣಸ್ವಭಾವಗಳ ವರ್ಣನೆ ಇದು. ಹೆಸರು ಹೇಳುವಾಗ ಹಿನ್ನೆಲೆಯಾಗಿ ತನ್ನ ಪತಿಯ ಅಥವಾ ಪತ್ನಿಯ ಕುರಿತಾಗಿ ಛೇಡಿಸುವ ಚೇಷ್ಟೆ (ತಮಾಷೆ)ಯ ಧಾಟಿ ಕಚಗುಳಿಯಿಡುವಂತಹದು.

ಹೊಲಕ್ಕೆ ಹೋದ ಗಂಡನ ದಾರಿಯನ್ನು ನಿರೀಕ್ಷಿಸುತ್ತಿರುವ ನಾರಿಯೋರ್ವಳು ತುಂಬ ಆತಂಕಗೊಂಡಿದ್ದಾಳೆ. ಅದಕ್ಕೆ ಕಾರಣವೇನೆಂದರೆ ತನ್ನ ಪತಿ ಇನ್ನೇನು ಹೊಲದಿಂದ ಮರಳಬೇಕು, ಅಷ್ಟರಲ್ಲಿ ಆಕಾಶದಲ್ಲಿ ಮೋಡ ಕವಿದು ಮಳೆ ಬರುವ ಸೂಚನೆಗಳಿವೆ. ಆತ ದಿನವೆಲ್ಲ ದುಡಿದು ಹಸಿದು ಮನೆಗೆ ಬರುವ ಸಮಯದಲ್ಲಿಯೇ ಮಳೆ ಆತಂಕವನ್ನುಂಟು ಮಾಡುವುದೆಂದು ಆಕೆ ಗಾಳಿ-ಮೋಡಗಳಿಗೆ ಹೀಗೆ ಎಚ್ಚರಿಸುತ್ತಾಳೆ :

ಗಾಳಿಗೋಡುವ ಮೋಡ ಮಳಿಯಾಗಿ ಸುರಿಬ್ಯಾಡ
ನನ್ನವರು ಹಸದು ಹೊಲದಿಂದ । ಬರುತಾರ
ನನಗಾಗಿ ಓಡಿ ಎಚ್ಚರಿಕಿ ।

ಆದರೆ ಮಳೆ ಕೇಳೀತೆ ? 'ಭೋರ್ಯಾಡಿ' ಸುರಿಯ ತೊಡಗಿದಾಗ ಆಕೆ ಮತ್ತೊಂದು ಸಲ ಮನವಿ ಮಾಡಿಕೊಳ್ಳುತ್ತಾಳೆ :

ಭೋರ್ಯಾಡೊ ಮಳಿರಾಯ ಬರಬ್ಯಾಡ ತಡಿಯಣ್ಣ
ಪುರುಷರಿಗೆ ಬೇಕು ತಿಳಿನೀರು । ಅವರಿಗು
ತೌರೂರ ಹೊಲಕ ಸುರಿಹೋಗು ।

ಮೇಲಿನ ಮಾತುಗಳಲ್ಲಿ ಗಂಡನ ಬಗೆಗಿನ ಆಕೆಯ ಕಾಳಜಿ, ಕಳಕಳಿ, ತವಕ, ತಲ್ಲಣಗಳ ಪ್ರೀತಿ ವಾತ್ಸಲ್ಯದ ತೀವ್ರ ಭಾವನೆಗಳಿವೆ. ಮಳೆ ಸುರಿದು ಕೆರೆ-ಹಳ್ಳಗಳು ತುಂಬಿ ಹರಿಯುತ್ತವೆ. ಆಗ ಅವಳಿಗೆ ತನ್ನಾವ ಅವುಗಳನ್ನು ದಾಟಿ ಬರುವ ಧೀರನೆಂಬ ಆತ್ಮವಿಶ್ವಾಸ :

ಚಿಕ್ಕೇರಿ ಹಳ್ಳವ್ವ ನೀನೇರಿ ಹರಿಬ್ಯಾಡ
ಸಮರುತ ದೊರಿ ನನ್ನಾತ । ಭೋರಿಡುವ
ನಿನ್ನೆದೆಯ ಮೆಟ್ಟಿ ದಾಟ್ಯಾರು ।

ಪತಿ ಯಾವುದೋ ಕೆಲಸಕ್ಕಾಗಿ ಪರಊರಿಗೆ ಹೊರಟು ನಿಂತಿದ್ದಾನೆ. ಅವನನ್ನು ಅರಗಳಿಗೆ ಅಗಲಿರಲಾರದೆ ಮುಖದಲ್ಲಿ ಬಿಂಕ-ಬಿಗುಮಾನ, ಸಿಟ್ಟು-ಸಿಡುಕುಗಳನ್ನು ತೋರುವ ಸತಿಯನ್ನು ಸಂತೈಸುತ್ತಿದ್ದಾನೆ:

ಅಕ್ಕನಾ ಮಗಳೇನ ಚಿಗಟೇರಿ ನವಿಲೇನ
ಸಾಗರದಾ ಅಡಕಿ ಸುಳಿಯೇನ । ನನಸತಿಯೆ
ಬೇಗ ಬರತೀನ ನಗುವೊಮ್ಮೆ ।

ಹತ್ತು ದಿನದ ಪಲ್ಯ ಮೆತ್ತನ್ನ ಸವಿರೊಟ್ಟಿ
ಬುತ್ತಿ ತೀರುವ ಮೊದಲೆ ನಾರಿ । ನಾ ನಿನ್ನ
ಒತ್ತೀಗೇ ಇರುವೆ ಮದನಾರಿ ।

ಬರುವಾಗ ನಿನಗಾಗಿ "ವಾರ ತಿರಗುವ ಮೊದಲೆ ನಾನೋಡಿ ಬಂದೇನು, ನೂರೊಂದು ತರದ ಸೀರಿಗಳ ತಂದೇನು, ನಾರಿ ನೀ ಕೊರಗಬ್ಯಾಡ" ಎಂದು ಸಮಾಧಾನ ಹೇಳುತ್ತಾನೆ. ಗಂಡನ

ಪ್ರಯಾಣ ಸುಖಕರವಾಗಲಿ ಎಂದು ದೇವರಲ್ಲಿ ಆಕೆ ಬೇಡು ತ್ತಾಳೆ. ಗಂಡನ ಬಗೆಗಿರುವ ಪ್ರೀತಿ ಅವನಿಂದ ಅಗಲುವ ಸಂದರ್ಭದಲ್ಲಿ ಭಯದ, ಆತಂಕದ ರೂಪ ತಾಳುತ್ತದೆ.

ಸಾಗರಕ ಹೋಂಟಾಗ ಸಗಟು ವ್ಯಾಪಾರಕ್ಕೆ
ಬ್ಯಾಗ ಬರಲವ್ವ ಹಿಂದಿರುಗಿ। ನನ್ನರಸ
ಕೂಗಿ ಬೇಡೇನ ಶಿವನಲ್ಲಿ ।

ಗಂಡ ಜೊತೆಗಿಲ್ಲದಿರುವುದರಿಂದ ಆಕೆಗೆ ಯಾವುದರಲ್ಲಿಯೂ ಸೊಗಸಿಲ್ಲ. ಅಗಲಿಕೆಯು ಅಸಹನೀಯವಾಗಿದೆ. ದೈನಂದಿನ ಚಟುವಟಿಕೆಗಳಲ್ಲಿ ನಿರಾಸಕ್ತಿ ಕಾಣಿಸಿಕೊಂಡಿದೆ;

ಒಪ್ಪತ್ತು ಉಂಡೇನ ಸಪ್ಪಗ ಮಲಗೇನ
ಸುಪ್ಪತ್ತಿಗಿ ತಡಿಯ ಮರತೇನ । ಇರುಳೆಲ್ಲ
ಒಪ್ಪುವ ಅರಸ ಜೊತೆಗಿಲ್ಲ ।

ಮನಸ್ಸಿನ ಬೇಸರ-ಬೇಗುದಿಗಳನ್ನು ಮರೆಯಲು ಬನದೊಳಗೆ ಸಂಚರಿಸಿದರೂ ಸೊಗಸಿಲ್ಲ. ನಲ್ಲನ ನೆನಪಾಗಿ ಇನ್ನಷ್ಟು ಉದ್ವಿಗ್ನತೆ, ಬನದೊಳಗಿನ ದುಂಬಿ. ಸುಳಿಗಾಳಿ ಆಕೆಯ ವಿರಹದ ಉರಿಯನ್ನು ಉದ್ದೀಪಿಸುತ್ತವೆ;

ಕಡಿಬ್ಯಾಡ ಮಲ್ಲಿಗಿಯ ಕರಿಯ ಗುಂಗೀ ಹುಳವೆ
ನನಗಾಗಿ ಹೂವ ತರುವಾಗ। ನನ್ನವರು
ಕಂಡಾರು ನಿನ್ನ ಕೆಡಿಸ್ಯಾರು.।

ಎಂದು ದುಂಬಿಗೆ ಎಚ್ಚರಿಸಿದರೆ,

ಕಡಿಬ್ಯಾಡ ಸುಳಿಗಾಳಿ ಮಲ್ಲಿಗಿ ನರುಗಂಪ
ಸರದಾರ ಕಂಡಾರೆ ಬೆನ್ನತ್ತಿ । ಹಿಡಿದು
ನಿನ ಮೈಗೆ ಬೇಡಿ ಬಿಗಿಸ್ಯಾರು ।

ಎಂದು ಗಾಳಿಯುನ್ನು ಬೆದರಿಸುತ್ತಾಳೆ. ದುಂಬಿಯ ಮಕರಂದ ಪಾನ, ಮಲ್ಲಿಗೆಯೊಡನೆ ಚೆಲ್ಲಾಟವಾಡುವ ಸುಳಿಗಾಳಿಗಳು ಆಕೆಗೆ ಅತೀವ ವೇದನೆಯುನ್ನುಂಟು ಮಾಡುತ್ತವೆ. ಸುತ್ತಣದ ಪರಿಸರದ ಉತ್ಸಾಹ–ಉಲ್ಲಾಸಗಳು ಆಕೆಗೆ ನಲ್ಲನೊಡನಾಟದ ಗಳಿಗೆಗಳನ್ನು ನೆನಪಿಸಿ ಚುಚ್ಚುತ್ತವೆ. ಈ ನಡುವೆ ಹೊತ್ತು ಕಳೆದು ಸಂಜೆಯಾಗುತ್ತದೆ. ಪತಿ ಇನ್ನೂ ಬಾರದಿರಲು ಆಕೆಗೆ ಕಣ್ಣಂಚಿನಲ್ಲಿ ಕಣ್ಣೀರು ಕಾಣಿಸಿಕೊಳ್ಳುತ್ತದೆ:

ಹೊತ್ತು ಹಾರಿತು ನೋಡೆ ಹಿತ್ತಲದ ಗೋಡೀಯ
ಚಿತ್ತ ಹೋದಾವ ಪತಿಪುರುಷ। ಹೋದಲ್ಲಿ
ಉತ್ತುಮನೆ ಬಾರೊ ಕಣ್ಣೊರಸು।

ಎಂದು ಪ್ರಾರ್ಥಿಸುತ್ತಾಳೆ. ಹೀಗೆ ತನ್ನ ಹೃದಯದ ಸೂಕ್ಷ್ಮ ಭಾವನೆಗಳಿಗೆ ಕೊಡುವ ಅಭಿವ್ಯಕ್ತಿ ಸರಳವಾದರೂ ಅಷ್ಟೇ ಪರಿಣಾಮಕಾರಿಯಾಗಿದೆ.

ಭಾವುಕ ಮನಸ್ಸು ಏನೇನೋ ಕಲ್ಪಿಸಿ ಭಯಗೊಳ್ಳುತ್ತದೆ. ತನ್ನಿನಿಯ ಕ್ಷೇಮವಾಗಿರಲಿ ಎಂದು ಮತ್ತೆ ದೈವಕ್ಕೆ ಮೊರೆ ಹೋಗುತ್ತದೆ.

ಕಾಗಿ ಮೆಟ್ಟುದ ಕಂಡೆ ತುಳುಕು ನಾಗರ ಕಂಡೆ
ಗೂಗಿ ಕೂಗುದ ಕಂಡೆ ಹಗಲೆ। ನನ್ನವರ
ನಗಿ ಮಾಸದಂತಿರಲಿ ಶಿವನೆ।

ತನ್ನ ಪತಿ ಇದ್ದಲ್ಲಿ 'ಸುಖವಾಗಿರಲಿ' ಎಂದು ಹೇಳುವದನ್ನೆ 'ನನ್ನವರನಗಿ ಮಾಸದಂತಿರಲಿ' ಎಂದು ಬೇಡಿಕೊಳ್ಳುವ ರೀತಿ ಬಹಳ ಅರ್ಥಪೂರ್ಣವಾದದ್ದು.

ಅರಸ ಹೋದಲೆಲ್ಲ ಹರುಷವಾಗಿರಲವ್ವ
ಸಿರಿಗಂಧ ಮರವು ನೆರಳ ಕೊಡಿ । ಹಿಡಿದಿರಲಿ
ಉರಿ ಬಿಸಿಲ ಮೋಡ ತೆರೆದಿರಲಿ ।

ಎಂಬ ಹಾರೈಕೆಗಿಂತಲೂ ಮೇಲಿನ ಮಾತು 'ನಗೆಮಾಸದಂತಿರಲಿ' ಹೃದಯಕ್ಕೆ ಮುಟ್ಟುವಂತಹದು; ಅವಳ ತೀವ್ರ ಭಾವನೆಗಳನ್ನು ಅರ್ಥೈಸುವಂತಹದ್ದು. ಈ ಮಾತುಗಳಲ್ಲಿರುವ ಅವಳ ಪತಿಪ್ರೇಮ ಅನನ್ಯವಾದದ್ದು.

ಹೀಗೆ ದುಗುಡ, ಆತಂಕ, ಭಯ, ನೋವು–ನೆನಹು, ಬೇಡಿಕೆ-ಹಾರೈಕೆಗಳಲ್ಲಿ ಕೆಲದಿನಗಳು ಕಳೆಯುತ್ತವೆ. ಇನಿಯನ ಆಗಮನದ ಸುದ್ದಿ ತಿಳಿದು ಪುಲಕಿತಳಾಗುತ್ತಾಳೆ. ಮೈಮನಸ್ಸುಗಳು ಹರ್ಷೋಲ್ಲಾಸಗಳಿಂದ ಉದ್ರೇಕಿತವಾಗುತ್ತವೆ:

ಊರ ಮುಂದಲ ಗಾಳಿ ತೂರಿ ಬಂದೀತವ್ವ
ಸಾರಿ ನಿನ್ನರಸ ಬರುತಾನ । ನಗು ಮಗಳ
ಸಾರಿ ಹೇಳೀತ ಕಿವಿಮಾತ ।

ರಸಬಾಳಿ ಬಾಗೀತ ಕಮಲ ಕೈ ಮುಗದೀತ
ಕುಸುಮಗಳ ನೆಲಮಡಿಯ ಹಾಸಿ । ಹರಡೀತ
ರಸಿಕ ನನರಾಯ ಬಂದಾರ ।

ಕುದುರೆಯನ್ನೇರಿ ಬಂದ ರಾಯನ ಮೇಲಷ್ಟೇ ಅಲ್ಲ. ತನ್ನವನನ್ನು ಸುರಕ್ಷಿತವಾಗಿ ಕರೆದುಕೊಂಡು ಬಂದ ಕುದುರೆಯ ಮೇಲೂ ಕೃತಜ್ಞತಾ ಭಾವ, ಎಲ್ಲಿಲ್ಲದ ಪ್ರೀತಿ ಆಕೆಗೆ:

ರಾಯರನು ಕರೆತಂದ ಗಾಳಿವೇಗದ ಕುದುರಿ
ನೀಯೆಷ್ಟು ಬೆವತಿ ಬಿಸಲಾಗ । ಬಾರ
ಮೈತಿಕ್ಕಿ ನಿನ್ನ ಮೋಸೇನ ।

ಗಂಡ ಪ್ರಯಾಣದ ದಣಿವಾರಿಸಿಕೊಂಡು ಚೇತರಿಸಿಕೊಂಡಾದ ಮೇಲೆ ಇದುವರೆಗೆ ಕೇಳಬೇಕೆಂದುಕೊಂಡಿದ್ದ ಮಾತುಗಳೆಲ್ಲ ಒಮ್ಮೆಲೆ ಬಾಯಿಗೆ ಬರುತ್ತವೆ. ಬೇಗ ಬರುವೆನೆಂದು ಹೇಳಿ ತಡ ಮಾಡಿದ ರೀತಿಗೆ ತೀವ್ರವಾಗಿ ಆಕ್ಷೇಪಿಸುತ್ತಾಳೆ:

ಎಷ್ಟು ದಿನ ಹೋಗೋದು ನಾನೆಷ್ಟು ಕಾಯೋದು
ಕಷ್ಟವಾಯಿತು ನನಗ ಜನಕ । ಹೇಳಿ ಹೇಳಿ
ದುಷ್ಟರಾಡ್ಯಾರ ನೂರೆಂಟ ।

ಯಾಕ ನೀ ಬರಲಿಲ್ಲ, ನನ್ನ ನೀ ಮರತ್ಯಾಕ
ಹಾದಿ ಹೂ ನಿನಗ ಮರುಳಾಯ್ತು । ಮಲ್ಲಿಗಿಯ
ಸಿರಿಗಂಪ ನೀ ಮರೆವುದೇನ ।

ಆತ ಬರುವುದನ್ನು ತಡಮಾಡಿದಾಗ ತನ್ನ ಕಷ್ಟ 'ದುಷ್ಟರಾಡ್ಯಾರ ನೂರೆಂಟ' ಎನ್ನುವಲ್ಲಿ ಧ್ವನಿತವಾಗಿದ್ದರೆ, ಪ್ರವಾಸ ಕಾಲದಲ್ಲಿ ಅನ್ಯ ಸ್ತ್ರೀ ವ್ಯಾಮೋಹಕ್ಕೆ ಒಳಗಾದೆಯೊ ಹೇಗೆ ? ಎಂಬುದನ್ನು 'ಹಾದಿ ಹೂ ನಿನಗ ಮರುಳಾಯ್ತೆ' ಎನ್ನುವಲ್ಲಿ, ಕೈ ಹಿಡಿದ ಸತಿಯನ್ನು ಮರೆವುದೇ ? ಎನ್ನುವುದನ್ನು 'ಮಲ್ಲಿಗಿಯ

ಸಿರಿಗಂಪ ನೀ ಮರೆವುದೇನ' ಎನ್ನುವಲ್ಲಿ ಧ್ವನಿತವಾಗಿದೆ. ಉತ್ತಮ ಕಾವ್ಯದ ಲಕ್ಷಣಗಳಾದ ಧ್ವನಿಪೂರ್ಣತೆ, ಸಂಕ್ಷಿಪ್ತತೆಗಳನ್ನು ಇಲ್ಲಿ ಕಾಣಬಹುದು. ಎಷ್ಟಾದರೂ ಮಲ್ಲಿಗೆಗಿರುವ 'ಸಿರಿಗಂಪು', ಬೆಲೆ ಹಾದಿ ಹೂವಿಗೆ (ಬಹುಶಃ ಜಾರಿಗೆ) ಬಂದೀತೆ ಎನ್ನುವ ಅರ್ಥವೂ ಇಲ್ಲಿದೆ. ಗಂಡನನ್ನು ನೇರವಾಗಿ ಆಕ್ಷೇಪಿಸಿದರೂ ಅವನ ಮನಸಿಗೆ ಚುಚ್ಚದಂತೆ ಪರ್ಯಾಯವಾಗಿ ಅಷ್ಟೇ ಸೂಚ್ಯವಾಗಿ ಮನನೋಯಿಸದೆ ಕೇಳುವ ಆಕೆಯ ಜಾಣ್ಮೆ ಎತ್ತಿ ಹೇಳಬೇಕಾದದ್ದು.

ಆಗ ಆತ ವಿಳಂಬದ ಕಾರಣವನ್ನು ವಿವರಿಸದೆ ಇರುವುದು ಅಸಾಧ್ಯ:

ಹಾದ್ಯಾಗ ಹರಿಹರ ದೊಡ್ಡಕ್ಕ ಬಿಡಲಿಲ್ಲ
ಬೀದ್ಯಾಗ ತಂಗಿ ಬಿಡಲಿಲ್ಲ । ನನರಂಭಿ
ಒಂದೇ ದಿನ ತಡವಾಗಿ ಬಂದೆ ।

ಗಂಡನ ಉತ್ತರದಿಂದ ಆಕೆಗೆ ನೆಮ್ಮದಿ. ಚಿಂತೆ ದೂರ. ಅವನ ಪ್ರಾಮಾಣಿಕತೆಯ ಬಗೆಗೆ ಪೂರ್ಣ ಭರವಸೆ ಹಾಗೂ ಪ್ರಶಂಸೆ:

ಕುಂದಿರದ ನುಡಿಯವರು ಬಂಗಾರ ಮಕದವರು
ಸಂಗಯ್ಯನಂಥ ಮನದವರು । ನನ್ನವರು
ಬಂಗಾರನೇನ ಸುಡಬೇಕು ।

ಗಂಡ ಬರುವಾಗ ಕೆಲ ದಿನ ವಿಳಂಬವಾದ ಕಾರಣ ಆಕೆಗೆ ಎದ್ದ ಸಂಶಯ ಈಗ ದೂರವಾಗಿದೆ. ಗಂಡನ ಬಗೆಗೆ ಅತ್ಯಂತ ವಿಶ್ವಾಸ. ಅವನ ಮನಸ್ಸು ಪರಿಶುದ್ಧವಾದದ್ದು ಎನ್ನುವುದನ್ನು

ಸೂಚಿಸುವಲ್ಲಿ 'ಸಂಗಯ್ಯ', ಬಂಗಾರ' ಎಂಬ ಎರಡು ಪ್ರತಿಮೆಗಳು ಸಾರ್ಥಕವಾಗಿವೆ. ಬಂಗಾರದ ಬಗೆಗೆ ಹೆಣ್ಣುಮಕ್ಕಳಿಗಿರುವ ಮೋಹವನ್ನು ಮತ್ತೆ ಹೇಳಬೇಕಾಗಿಲ್ಲ. ಅಂಥದರಲ್ಲಿ ಗಂಡನೊಂದಿಗಿರುವ 'ಕುಂದಿರದ ಬದುಕು' ಇರುವಾಗ ಅದರ ಅವಶ್ಯಕತೆಯಾದರೂ ಏನು ? ಅದಕ್ಕಿರುವ ಬೆಲೆಯಾದರೂ ಎಷ್ಟರದು ? ತನ್ನ ಗಂಡನ ಚಾರಿತ್ರ್ಯದ ಇದಿರು ಅದೆಷ್ಟು ಅರ್ಥಹೀನ! ಇನ್ನು ಸಂಗಯ್ಯ–ಸಂಗಮನಾಥ–ದೇವರಂಥ ಮನಸ್ಸು ಎನ್ನುವುದನ್ನು ವಿವರಿಸುವ ಅಗತ್ಯವಿಲ್ಲದೆ ಅರ್ಥವಾಗುವಂತಹದು.

ಮಡದಿ ತೌರಿಗೆ ಹೋಗಿದ್ದಾಳೆ. ಇದರಿಂದಾಗಿ ಪತಿಗೆ ಅವಳ ಅಗಲಿಕೆ ಮಾಡಿರುವ ಪರಿಣಾಮ ಇದು;

ಅಡಿಗೀಯ ಮನಿಯಾಗ ಮಡದೀಯ ಸುಳಿವಿಲ್ಲ
ಅಡಗಿ ಬಾಯೀಗಿ ರುಚಿಯಿಲ್ಲ । ಹಡೆದವ್ವ
ಮಡದಿ ತೌರಿಗೆ ಹೋಗ್ಯಾಳ ।

"ಮಡದಿ ತೌರಿಗೆ ಹೋಗಿದ್ದಾಳೆ; ಅವಳ ಕೈಯ ಅಡಿಗೆಯ ರುಚಿಗೆ ಮಾರುಹೋಗಿದ್ದವನಿಗೆ ತಾಯ ಕೈಯ ಅಡಿಗೆ ನೀರಸವಾಗಿ ತೋರುತ್ತದೆ. ಈ ವ್ಯಕ್ತಿಗೆ ಹೆಂಡತಿಯ ಮೇಲಿರುವ ಮೋಹ, ಅವಳು ಗಂಡನ ಮೇಲೆ ಬೀರಿರುವ ಮೋಡಿ ಈ ಮಾತಿನಲ್ಲಿ ಸುವ್ಯಕ್ತವಾಗುತ್ತದೆ. ಆದರೆ ನಾವು ಇನ್ನೂ ಮುಂದಕ್ಕೆ ಹೋಗಬೇಕು. ಹೆಂಡತಿ ಬರುವುದಕ್ಕೆ ಮುನ್ನ ತಾಯ ಕೈಯ ಅಡಿಗೆಯೂ ರುಚಿಕರವೆ ಆಗಿರುತ್ತಿತ್ತು; ಮದುವೆಯಾದ ಮೇಲೆ ಅದು ಅಪ್ರಿಯವಾಯಿತೆ ? ವಾಸ್ತವವಾಗಿ 'ಹಡೆದವ್ವ'ನ ಮೇಲೆ ಅವನಿಗೀಗ ಪ್ರೀತಿಯಿಲ್ಲ; ಅದಕ್ಕೆಲ್ಲ

ಹೆಂಡತಿಯೆ ಹಕ್ಕುದಾರಳಾಗಿದ್ದಾಳೆ. ತಾಯಿ ಯಾವಾಗ ಇಷ್ಟವಿಲ್ಲವೊ ಆಗ ಅವಳು ಮಾಡಿದ ಅಡುಗೆಯೂ ಅರೋಚಕವೇ. ಈ ಮಾತನ್ನು ಕೇಳಿದ ಆ ತಾಯ ಹೃದಯಕ್ಕೆ ಎಷ್ಟು ನೋವಾಗಿರಬೇಕು! ಮದುವೆಯಾದ ಬಳಿಕ ಗಂಡು ಮಕ್ಕಳಲ್ಲಾಗುವ ಪರಿವರ್ತನೆಯನ್ನು ಈ ತ್ರಿಪದಿ ಎಷ್ಟು ಪರಿಣಾಮಕಾರಿಯಾಗಿ, ಮನೋವೈಜ್ಞಾನಿಕವಾಗಿ ಅರುಹುತ್ತದೆ!"[೧]

ಹೆಣ್ಣಿಗೆ ತೌರಿನ ಹಂಬಲ ಬಹಳ. ತನ್ನ ಬಂಧು ಬಳಗ ತಾಯ್ತಂದೆಗಳನ್ನು ಆಗಾಗ ಕಂಡು ಅವರೊಡನೆ ಕೆಲದಿನವಿದ್ದು ಬಾರದ ಹೊರತು ಅವಳಿಗೆ ಸೊಗಸಾಗದು. ಆದ ಕಾರಣ ಆಗಾಗ ಗಂಡನೆದುರಿಗೆ ತಾನು ತೌರಿಗೆ ಹೋಗಿಬರುವ ಪ್ರಸ್ತಾಪ ಮಾಡಿದರೂ ಆತ ಒಪ್ಪುವದಿಲ್ಲವೆಂದು ಆಕೆಗೆ ಗೊತ್ತು. ಅದಕ್ಕಾಗಿ ಆಕೆ ಉಪಾಯವಾಗಿ ಗಂಡನ ಮನವೊಲಿಸಿ ಕೇಳುವ ರೀತಿ ಇದು :

ಕಂದೀಲ ಬೆಳಕೀಲಿ ಗಂಡಗೂಟಕ ನೀಡಿ
ದಾಳಿಂಬರಿ ಸೆರಗ ಮರಿಮಾಡಿ । ಕೇಳ್ಯಾಳ
ಹೋಗಿ ಬರತೀನಿ ತವರೀಗೆ ।

'ದಾಳಿಂಬರ ಸೆರಗ ಮರಿಮಾಡಿ' ಕೇಳುವಲ್ಲಿ ಆಕೆಯ ಕುಶಲತೆಯಿದೆ. ಪತಿಯ ಮನಸ್ಸನ್ನು ಪ್ರೀತಿಯಿಂದ ಒಲಿಸಿಕೊಂಡು ಆಕೆ ಕೇಳಿದರೂ ಆತ—

---

೧. ಡಾ. ಸಿ. ಪಿ. ಕೆ. : ಜಾನಪದ ಪ್ರತಿಭೆ, ಪುಟ ೩೬-೩೭.

ನಾಕೂ ಗುಳ್ಳವ್ವಾಗಲಿ, ನಾಗರ ಪಂಚಮಿ ಬರಲಿ
ನಾರಿ ನಿಮ್ಮಣ್ಣ ಕರಿಬರಲಿ । ನಾ ನಿನ್ನ
ಮೇಣೆಗೋಳಕೊಟ್ಟ ಕಳವೀನ ।

ಎಂದು ಹೇಳಿ ಮುಂದೂಡುತ್ತಾನೆ. ಆಗ ಆಕೆಗೆ ಕಳವಳವಾಗಿ ಹೋಗಿ ಬರುವ ಕುರಿತು ಹಟ ಹಿಡಿದಾಗ ಆತ ಸಿಟ್ಟಿಗೆದ್ದು ಎರಡೇಟು ಬಡಿಯುತ್ತಾನೆ. ಆಕೆಯು ಮನಸ್ಸಿಗೆ ನೋವಾಗಿ ಅಳುತ್ತಾಳೆ. ಆಕೆ ಕಣ್ಣೀರು ಹಾಕುವುದನ್ನು ಕಂಡ ತಕ್ಷಣ ಆತನ ಸಿಟ್ಟಿಳಿದು ಕರಗಿ ನೀರಾಗುತ್ತಾನೆ. ಸಂತೈಸಲು ಮುಂದಾಗುತ್ತಾನೆ :

ಮಡದೀಯು ಬಡದಾನ ಮನದಾಗ ಮರಗ್ಯಾನ
ಒಳಗ್ಹೋಗಿ ಸೆರಗ ಹಿಡಿಯೂತ । ಕೇಳ್ಯಾನ
ನಾ ಹೆಚ್ಚೋ ನಿನ್ನ ತವರ್ಹೆಚ್ಚೊ ।

ಅವಳ ಹಟದಿಂದಾಗಿ ಅವನ ಸಿಟ್ಟು, ಅದರ ಪರಿಣಾಮವಾಗಿ ಹೊಡೆತ, ತಕ್ಷಣ ಅವಳ ಕಣ್ಣೀರು ಕಂಡು ಕರಗುವಿಕೆ, ಮರುಗುವಿಕೆ, ಪ್ರೀತಿಯಿಂದ 'ನಾ ಹೆಚ್ಚೋ ನಿನ್ನ ತವರ್ಹೆಚ್ಚೋ' ಎಂದು ಕೇಳಿ ಸುಮ್ಮನಾಗಿಸುವಿಕೆ— ಈ ಎಲ್ಲ ಭಾವಪರಿವರ್ತನೆ ಕ್ರಿಯೆಗಳನ್ನು ಮೇಲಣ ತ್ರಿಪದಿ ತುಂಬ ಅಚ್ಚುಕಟ್ಟಾಗಿ ನಿರೂಪಿಸಿದೆ. ಹೆಣ್ಣಿಗೆ "ತಾಯಿದ್ರ ತವರ್ಹೆಚ್ಚು ತಂದಿದ್ರ ಬಳಗ್ಹೆಚ್ಚು ಸಾವಿರಕೆ ಹೆಚ್ಚು ಪತಿಪುರುಷ । ಹೊಟ್ಟೆಯ ಮಾಣಿಕದ ಹರಳು ಮಗ ಹೆಚ್ಚು." ಹೀಗಿರುವಾಗ 'ನಾ ಹೆಚ್ಚೋ ನಿನ್ನ ತವರ್ಹೆಚ್ಚೋ' ಎಂದು ಕೇಳಿದಾಗ ಪಾಪ ಆಕೆ ಏನೆಂದು ಉತ್ತರಿಸಿಯ್ಯಾಳು ? ಸಹಜವಾಗಿ ಅವನ ಮಾತಿಗೆ 'ಅಳು ನುಂಗಿ ನಕ್ಕಿರಬೇಕು'. ಆತ ಮುಂದುವರೆದು ಹೀಗೆ ಹೇಳುತ್ತಾನೆ :

ಹಾಸೀಗಿ ಹಾಸೆಂದ ಮಲ್ಲೀಗಿ ಮುಡಿಯಂದಾ
ಬ್ಯಾಸತ್ತರ ಮಡದಿ ಮಲಗೆಂದಾ । ನನರಾಯ
ತನ ನೋಡಿ ತವರ ಮರಿಯೆಂದಾ

ಜನಪದ ಸಮಾಜದಲ್ಲಿ ಅವಿಭಕ್ತ ಕುಟುಂಬಗಳದೇ ಅಗ್ರ ಪಾಲು. ಮನೆಯಲ್ಲಿ ಸದಸ್ಯರ ಸಂಖ್ಯೆ ಬಹಳ. ಅತ್ತೆ, ಮಾವ, ಭಾವ, ಮೈದುನ. ನೆಗೆಯಣ್ಣಿಯರು, ನಾದಿನೆಯರು ಮುಂತಾದವರೊಡಗೂಡಿ ಅವರ ರುಚಿ-ಅಭಿರುಚಿ, ಬೇಕು-ಬೇಡಗಳನ್ನು ಕಂಡುಕೊಂಡು ಮನೆಮಂದಿಗೆಲ್ಲ ಹಿತವಾಗುವಂತೆ ನಡೆದುಕೊಳ್ಳುವದು ಹೊಸದಾಗಿ ಬಂದ ಸೊಸೆಯ ಕರ್ತವ್ಯ. ಆಕೆ 'ಸಣ್ಣಾಗಿ' ನಡೆದುಕೊಂಡರೂ ಅಪವಾದ, ಆಕ್ಷೇಪಣೆಗಳು ತಪ್ಪಿದ್ದಲ್ಲ ದಿನವೆಲ್ಲ ದುಡಿತ, ಮೇಲೆ ಮನೆಮಂದಿಯ ಚುಚ್ಚು ಮಾತುಗಳು. ಹೀಗಾಗಿ ಆಕೆಗೆ ಬೇಸರ-ಬೇಗುದಿ, ತವರ ನೆನಪು. ಇದುವರೆಗೆ ತೌರೂರಿನಲ್ಲಿ ತನ್ನವರೊಂದಿಗೆ 'ಸ್ವೇಚ್ಛೆ' ಯಿಂದ ಇದ್ದವಳಿಗೆ ಇದೊಂದು ಬಂಧನದಂತೆ ಭಾಸವಾಗಿರಲೂಬಹುದು. ಆದುದರಿಂದ ಗಂಡನ ಎದುರಿಗೆ ಮಾತ್ರ, ಅದೂ ಏಕಾಂತದಲ್ಲಿ ಮನದೊಳಗಿನ ಮಾತನ್ನು ಹೇಳಬೇಕು. ಆಕೆಯ ತೊಂದರೆ ತಾಪತ್ರಯಗಳು ಗಂಡನಿಗೆ ಗೊತ್ತಿರದವುಗಳೇನಲ್ಲ. ಆದರೂ ಅವನೇನೂ ಮಾಡಲಾರ; ಅವಳನ್ನೂ ತೌರಿಗೆ ಕೆಲ ದಿನ ಕಳುಹಿಸಿ ಬಿಟ್ಟಿರಲಾರ. ಹೀಗಾಗಿ ಆತ ಆಕೆಯನ್ನು ಸಾಂತ್ವನಗೊಳಿಸುವದಕ್ಕಾಗಿ ಮೇಲಿನ ಮಾತುಗಳನ್ನು ಹೇಳುತ್ತಾನೆ. 'ಹಾಸೀಗಿ ಹಾಸೆಂದ ಮಲ್ಲೀಗಿ ಮುಡಿಯೆಂದಾ' ಎನ್ನುವಲ್ಲಿ "ದಾಂಪತ್ಯ ಸುಖ' ದಲ್ಲಿ ಅದೆಲ್ಲವನ್ನೂ ಮರೆ ಎಂದು ಸೂಚಿಸುವವದರೊಂದಿಗೆ 'ತನನೋಡಿ ತವರ ಮರಿಯೆಂದಾ' ಎನ್ನುವಲ್ಲಿ

ಅವಳಿಗೆ ಮಾನಸಿಕ ಧೈರ್ಯವನ್ನು ತುಂಬುವದರೊಂದಿಗೆ ಅವಳ ಮನಸ್ಸನ್ನು ಬೇರೆಡೆಗೆ ತಿರುಗಿಸುತ್ತಾನೆ. ಗಂಡನ ಈ ಮಾತು ಗಳು ಅವಳಿಗೆ ಎಲ್ಲಿಲ್ಲದ ಸ್ಥೈರ್ಯ ನೀಡುತ್ತವೆ. ತವರನ್ನು ಮರೆ ಯುವದು ಈಗ ಕಷ್ಟವಾಗುವುದಿಲ್ಲ:

ಹಣಚಿಬಟ್ಟಿನಮ್ಯಾಲ ಹರಿದಾಡು ಕುಂಕುಮ
ವಾರೀಗಿ ಪುರುಷ ಇದಿರೀಗಿ। ಕುಂತರ
ಹೆಚ್ಚಿನ ತವರ ಮರತೇನ ।

ಅದಕ್ಕಾಗಿಯೇ ಸ್ವತ: ತನ್ನ ತವರವರು ಬಂದು ಕರೆ ದರೂ ಆಕೆಗೆ ಗಂಡನನ್ನು ಅಗಲಿ ತೌರಿಗೆ ಹೋಗುವ ಮನಸ್ಸಾ ಗುವದಿಲ್ಲ. ಅದನ್ನಾಕೆ ಕಂಠೋಕ್ತವಾಗಿ ಹೇಳಿ ಬಿಡುತ್ತಾಳೆ.

ಹಚ್ಚಡದ ಪದರಾಗ ಅಚ್ಚಮಲ್ಲಿಗಿ ಹೂವ
ಬಿಚ್ಚಿ ನನಮ್ಯಾಲ ಒಗೆವಂಥ, ರಾಯರನ
ಬಿಟ್ಟ್ಹ್ಯಾಂಗ ಬರಲೆ ಹಡದವ್ವ।

ತನ್ನ ಗಂಡ ತನಗೆ ತೋರುವ ಪ್ರೀತಿ, ಕೊಡುವ ಸುಖ ಅಷ್ಟು ಅನನ್ಯವಾಗಿರುವಾಗ ಅವನನ್ನಳಿದು ಬರುವುದಾದರೂ ಹೇಗೆ ? ಎಂಬುದು ಅವಳ ಪ್ರಶ್ನೆ. ಮಧುರ, ಅನ್ಯೋನ್ಯ ದಾಂಪತ್ಯಪ್ರೇಮದ ಉತ್ತಮ ಉದಾಹರಣೆಗಳಿವು. ಗಂಡನ ಪ್ರೀತಿಯ ಎದುರಿಗೆ ಸಿರಿತನ–ಬಡತನಗಳು ಅಮುಖ್ಯ. ಅವನೇ ಅವಳ 'ಬಂಗಾರದ ಮಾಲು'

ಕೂಲಿ ಮಾಡಿದರೇನ ಕೋರಿ ಹೊತ್ತರೇನ
ನಮಗ ನಮರಾಯ ಬಡವೇನ। ಬಂಗಾರದ
ಮಾಲ ಇದ್ದಾಂಗ ಮನಿಯಾಗ।

ಮನೆ ಮಂದಿಯಿಂದ ತುಂಬಿದ ಮನೆಯಲ್ಲಿ ನವದಂಪತಿಗಳಿಗೆ ಏಕಾಂತಕ್ಕೂ ಅವಕಾಶ ಕಡಿಮೆ. ಆದರೂ ಮನಸ್ಸು ಕೇಳದು, ಗಂಡ ಹಿಂದುಮುಂದು ನೋಡದೆ ಹುಡುಕುವ ಸ್ವಭಾವದವನು. ಎಲ್ಲರೆದುರು ಹೆಂಡತಿಯನ್ನು ಮಾತನಾಡಿಸಲೂ ನಾಚಿಕೆ. ಯಾರೂ ಸುತ್ತಮುತ್ತ ಕಾಣದ ಸಂದರ್ಭ ನೋಡಿ ಪ್ರೀತಿಯಿಂದ ಹೆಂಡತಿಯ ಕೈ ಹಿಡಿದಾಗ ಆಕೆ,

> ಹಚ್ಚಿಬಟ್ಟಿನ ಕೈಯ ಒತ್ತಿ ಹಿಡಿಯಲಿ ಬ್ಯಾಡ
> ನೆತ್ತರಿಳಿದಾವ ಬಟ್ಟೀಗಿ । ನನರಾಯಾ
> ಅತ್ತೆವ್ವ ಬೈದಾಳು ಕೈ ಬಿಡ ।

ಗಂಡನ ಪ್ರೀತಿಯನ್ನು, ಅದರ ತೀವ್ರತೆಯನ್ನು ಅರ್ಥ ಮಾಡಿಕೊಳ್ಳುವಳಾದರೂ-ಮನಸ್ಸಿನಲ್ಲಿ ಈ ಚೆಲ್ಲಾಟ ಬೇಕೆನಿಸಿದರೂ-ಬಹಿರಂಗದಲ್ಲಿ ಆತ ಜೋರಾಗಿ ಬಹುಶಃ ಹಿಚುಕಿದರ ಫಲವಾಗಿ ಆಕೆಗೆ ಕೂಗಲೂ ಆಗದು ಅದಕ್ಕಾಗಿ ಆ 'ಪ್ರೀತಿಯ ನೋವ'ನ್ನು ತಡೆದುಕೊಂಡು ಪರ್ಯಾಯವಾಗಿ 'ನೆತ್ತರಿಳಿದಾವ ಬಟ್ಟೀಗಿ' ಎಂದು ಸೂಚ್ಯವಾಗಿ ತಿಳಿಸುವಲ್ಲಿ ಜಾಣ್ಮೆಯಿದೆ. ಅಷ್ಟಕ್ಕೂ ಆತ ಬಿಡುವುದಿಲ್ಲವೆಂಬುದು ಆಕೆಗೆ ಗೊತ್ತು. ಆದ ಕಾರಣ 'ಅತ್ತೆವ್ವ ಬೈದಾಳು' ಎಂದು ಹೇಳಿದಾಗ ಬಹುಶಃ ಆತ ತಟಕ್ಕನೆ ಕೈ ಬಿಟ್ಟಿರಬೇಕು! ಇಂಥ ಒಂದು ಸಣ್ಣ ಸಂಗತಿಯ ಸುತ್ತ ಸ್ವಾರಸ್ಯಪೂರ್ಣವಾದ ಸುಂದರ ಶಬ್ದಚಿತ್ರವೊಂದನ್ನು ಕಟ್ಟಿಕೊಡುವ ಜನಪದ ಪ್ರತಿಭೆ ನಿಜಕ್ಕೂ ಆಶ್ಚರ್ಯಕರವಾದದ್ದು.

ಗಂಡನೊಂದಿಗೆ ಚೆಲ್ಲಾಟದಲ್ಲಿ ಮೈಮರೆತವಳಿಗೆ ಉಳಿದೆಲ್ಲ ಆ ಕ್ಷಣದಲ್ಲಿ ಮರೆತು ಹೋಗುವದು ಸ್ವಾಭಾವಿಕವೇ. ಇಂಥ

ಸಂಗತಿಯನ್ನು ಜನಪದ ಕವಿ ಅವಕ್ಕೊಂದು ಚಿನ್ನದ ರೇಖೆಯ ಸ್ಪರ್ಶಕೊಟ್ಟು ಚಿರಂತನಗೊಳಿಸುತ್ತಾನೆ :

ನಲ್ಲನ ಬಾವಲಿ ಗಲ್ಲಕ ಬಡಿವಾಗ
ಹುಲ್ಲೀನ ಕೆಳಗ ಹುಡದೀಯ । ಆಡುವ ಕಂಡು
ಹೂರಣಕ ಬೆಲ್ಲ ಮರತಾಳ ।

ಶೃಂಗಾರ ಚೇಷ್ಟೆ ತಂದು ಕೊಡುವ ಪರವಶ ಸ್ಥಿತಿಗೆ ಮೇಲಿನ ಪದ್ಯ ಸೊಗಸಾದ ನಿದರ್ಶನ. (ಅದರ ಪರಿಣಾಮವೇ ಆಕೆ ಹೂರಣಕೆ ಬೆಲ್ಲ ಮರೆತದ್ದು. ಬಹುಶಃ ನಲ್ಲ ಕೊಟ್ಟ ಬೆಲ್ಲದ (=ಮುದ್ದು) ಸವಿಯ ಮುಂದೆ ಅದು ಅನಗತ್ಯ ಎಂದು ಭಾವಿಸಿರಬೇಕು.) ತರುಣಿಯೊಬ್ಬಳು ಮೈನೆರೆದು ಹರಯಕ್ಕೆ ಕಾಲಿರಿಸಿದ್ದಾಳೆ. ಅವಳ ಗಂಡ ಅದನ್ನು ತಿಳಿಯದೆ ದಂಡಿಗೆ ಹೊರಟಿದ್ದಾನೆ. ಅವಳಿಗೂ ಅದನ್ನು ಅವನಿಗೆ ತಿಳಿಸಬೇಕೆಂಬ ಕಾತುರತೆ. ಆದರೆ ಅದನ್ನು ಬಾಯಿಬಿಟ್ಟು ಹೇಳುವುದು ಹೆಣ್ಣಿನ ಸಂಕೋಚದ ಪ್ರವೃತ್ತಿಗೆ ಆಗದ ಮಾತು. ಅದಕ್ಕಾಗಿ ಅದನ್ನು ಸೂಚ್ಯವಾಗಿ ಸೂಚಿಸುತ್ತಾಳೆ :

ಗಂಡ ದಂಡಿಗೆ ಹೋಗಬೇಡ.
ಗಂಡ ಚಾಕರಿಗೆ ಹೋಗಬೇಡ.
ಗಂಡ ನಿನಗೆ ತಿಳಿಯಲಿಲ್ಲ.
ದಾಳಿಂಬೆ ರುಚಿಯ ನೋಡಲಿಲ್ಲ ...
ಹನ್ನೆರಡು ವರ್ಷದ ಪ್ರಾಯ ನನಗ ನಿನಗ ಜೋಡಿ.

. . . . . .

ಗಂಡ ಊರಮುಂದೆ ಒಂದು
ಗಂಡ ಮರವೆ ಹುಟ್ಟಿತಲ್ಲೊ
ಮರವೆ ಹುಟ್ಟಿತು ಮೊಗ್ಗು ಬಿಟ್ಟಿತು
ಹೂವು ಅರಳಿತು ಮುಡಿಯುವರ್‍ಯಾರಿಲ್ಲ
....
....
....

ಗಂಡ ಊರಮುಂದೆ ಒಂದು
ಗಂಡ ಕೆರೆಯು ಕಟ್ಟಿತಲ್ಲೊ
ಕೆರೆಯು ಕಟ್ಟಿತು ಕೆರೆಯು ಕಟ್ಟಿತು
ಮಳೆಯು ಹೂದಿತು ಕೋಡಿ ಬಿದ್ದಿತು
ನೋಡುವರ್‍ಯಾರಿಲ್ಲ.
....
....
....

ಗಂಡ ಊರ ಮುಂದೆ ಒಂದು
ಗಂಡ ಕುದುರೆ ಕಟ್ಟಿತಲ್ಲೊ
ಕುದುರೆ ಕಟ್ಟಿತು ಕುದುರೆ ಕಟ್ಟಿತು
ಜೀನು ಬಿಗಿದಿತು ಕಡಿವಾಣ ಹಾಕಿತು
ಹತ್ತುವರ್‍ಯಾರಿಲ್ಲ.
....
....
....

ಜನಪದ ಸಮಾಜದಲ್ಲಿ ಬಾಲ್ಯವಿವಾಹ ಪದ್ಧತಿ ಮೊದಲಿನಿಂದಲೂ ಪ್ರಚಲಿತವಾದದ್ದು. ಬಾಲ್ಯದಲ್ಲಿ ಮದುವೆಯಾದರೂ ದಾಂಪತ್ಯಜೀವನದ ಆರಂಭವಾಗುವುದು ಕನ್ಯೆ ಮೈನೆರೆದಮೇಲೆ. ವಿವಾಹವಾಗಿ ಬಹುದಿನಗಳಾದ ಮೇಲೆ ವೈವಾಹಿಕ ಸುಖವನ್ನು ಅನುಭವಿಸುವ ಅವಕಾಶ ಈಗ ತಾನು ಪ್ರಾಪ್ತವಯಸ್ಕಳಾಗಿರುವುದರಿಂದ ಒದಗಿದೆ. ಆದರೆ ಈಗ ಗಂಡ ದಂಡಿಗೆ ಹೊರಟು ನಿಂತಿದ್ದಾನೆ. ಆಕೆ ಋತುಮತಿಯಾಗಿರುವುದನ್ನು ಆತ ಅರಿಯ. ದಂಡಿಗೆ ಹೊರಟಿರುವ ಆತ ಮರಳಿ ಬರುವುದು ಯಾವಾಗ ಏನೋ. ಅದು ಅನಿಶ್ಚಿತ ಆದಕಾರಣ ಹೋಗುವ ಮುಂಚೆ ತನ್ನೊಂದಿಗೆ ದಾಂಪತ್ಯಸುಖವನ್ನು ಅನುಭವಿಸಿ ಹೋದರೆ ಒಳಿತು ಎಂಬುದು ಆಕೆಯ ಮನೋಗತ. ಇದನ್ನು ಆಕೆ ಮರ ಹೂ ಬಿಟ್ಟಿರುವುದು, ಕೆರೆಯೊಡೆದು ಕೋಡಿ ಬಿದ್ದಿರುವುದು, ಕುಮರೆ ಕಟ್ಟಿದುದು–ಈ ಉದಾಹರಣೆಗಳ ಮೂಲಕ ತಾನು ಋತುಮತಿಯಾದುದನ್ನು ಸಾಂಕೇತಿಕವಾಗಿ ಸೂಚಿಸಿ, ದಾಳಿಂಬೆ ಹಣ್ಣಿನಂತಹ ತನ್ನೊಂದಿಗೆ ಒಮ್ಮೆಯಾದರೂ ಸುಖಪಡೆದು ಹೋಗುವುದು ಶ್ರೇಯಸ್ಕರವೆನ್ನುತ್ತಾಳೆ. ಆಕೆಯ ಭಾವನೆಗಳೆಲ್ಲ ಪರಿಣಾಮಕಾರಿಯಾಗಿ ಸೂಚ್ಯವಾಗಿ ಅಭಿವ್ಯಕ್ತವಾಗುವಂತೆ ನಿರ್ವಹಿಸಿರುವ ಕವಿಜಾಣ್ಮೆ ಗಮನಾರ್ಹವಾದುದು. ಇಂತಹ ಉದಾಹರಣೆಗಳು ಜನಪದ ಸಾಹಿತ್ಯದಲ್ಲಿ ಮಾತ್ರ ದೊರೆಯುವುದು ಅದರ ವೈವಿಧ್ಯ. ವೈಶಿಷ್ಟ್ಯಗಳಿಗೆ ನಿದರ್ಶನ. ಇಂಥ ಅಪೂರ್ವವಾದ ಇನ್ನೆರಡು ಉದಾಹರಣೆಗಳನ್ನಿಲ್ಲಿ ಅವಲೋಕಿಸಬಹುದು;

ಗದ್ದೆಗೆ ಹೊರಟು ನಿಂತ ಪತಿರಾಯ ತನ್ನ ಹೆಂಡತಿಗೆ ಬೇಗ ಓಟ್ಟು (ರಾಗಿಮುದ್ದೆ) ತರಬೇಕೆಂದು ಅಪ್ಪಣೆಮಾಡಿ,

ಆಕೆಯನ್ನು ಬೆದರಿಸಲು ಉಳುವ ಕೋಲು ತೋರಿಸುತ್ತಾನೆ—ವಿಳಂಬವಾದರೆ ಆದರಿಂದಲೇ ಏಟು ಕೊಡುವೆನೆಂದು. ಆದರೆ ಅವನ ಹೆಂಡತಿ ಪುಕ್ಕಲು ಸ್ವಭಾವದವಳಲ್ಲ, ದಿಟ್ಟೆ. ಕೆಲಸದ ಒತ್ತಡದ ಜೊತೆಗೆ ಗಂಡನ ಗಡಿಬಿಡಿ. ಬಿಸಿ ಅಡುಗೆ ಬೇಗ ಆಗ ಬೇಕು; ಮಗುವನ್ನೂ ಅತ್ತ 'ನೋಡಿಕೊಳ್ಳಬೇಕು'. ಜತೆಗೆ ಗಂಡನ ಗದ್ದೆ ಬೇರೆ ದೂರ. ಇದಕ್ಕೂ ಮಿಗಿಲಾಗಿ ಗಂಡನ ಬೆದರಿಕೆ. ಸಹಜವಾಗಿ ಅವಳು ಮುನಿಸಿಕೊಳ್ಳುತ್ತಾಳೆ. ಆಗ ಗಂಡ ಉಪಾಯವಾಗಿ ಜಾರಿಕೊಳ್ಳುತ್ತಾನೆ: ತಾನು ಉಳುವ ಕೋಲು ತೋರಿದ್ದು ನಿನಗಲ್ಲ ಎತ್ತಿಗೆ ಎಂದು. ಹಿಟ್ಟು ತರುವು ದನ್ನು ಮರೆಯಬಾರದೆಂದು ನಯವಾಗಿ ನುಡಿಯುತ್ತಾನೆ. ಈ ದೃಶ್ಯವನ್ನು ಜನಪದ ಕವಿ ಸ್ವಾರಸ್ಯಪೂರ್ಣವಾಗಿ ಹಿಡಿದಿಟ್ಟಿರುವ ರೀತಿ ಇದು;

ಆತ : ಹಿತ್ತಲವರೆಯು ಕಾಯಿ ಸುತ್‌ಕಟ್ಟಿ ಕುಯ್ಯೋಳೆ
ಇತ್ತಲಾಗೆ ಕೇಳಮ್ಮಿ ನನ್‌ಮಾತ । ಮಾವನ ಮಗಳೆ
ಹೊತ್ನಂತೆ ಹಿಟ್ಟು ತರಬೇಕು.

ಆಕೆ : ದೂರದ ಗದ್ದೆಯ ಯಾರ್ ಕೇಳಿ ಮಾಡ್ದೆ ?
ಬಾಲನ ಮಲಗಿಸಿ ಬರಬಾರ್ದೆ । ರಾಯರೆ
ಯಾರಿಗಿ ತೋರುವಿರಿ ಹರಿಕೋಲ ?

ಆತ : ಸಣ್ಣ ಸೀರೆಯೋಳೆ ಸಾದಿನ ಬುಟ್ಟಿನೋಳೆ
ನಿಂಗೆ ತೋರ್ರಿಲ್ಲ ಎಲೆಯೋಳೆ । ಬೆಲೆಯೋಳೆ
ನಾಲ್ಕು ಕಾಲಿನ ಬಸವಂಗೆ
ನಾಲ್ಕು ಕಾಲಿನ ಬಸವಂಗೆ ತೋರಿವ್ನಿ

ಸುಮ್ಮನೆ ನಡೆಯೆಣ್ಣೆ ಮನೆಗೀಗ । ನನರಾಣಿ
ಹಿಟ್ಟು ತರುವುದನು ಮರತೀಯೆ ?

ಮೊದಮೊದಲು ಗಂಡನೆಂಬ ಗಡುಸಿನಿಂದ ಬೆದರಿಸಿದಾಗ ಅವಳು ಮುನಿಸಿಕೊಂಡದ್ದನ್ನು ಕಂಡು ತಣ್ಣಗಾಗಿ, ಸಿಟ್ಟಿನ ಭರದಲ್ಲಿ ಅವಳೆಲ್ಲಿ ಹಿಟ್ಟು ತರುವುದನ್ನು ತಡಮಾಡಿಯಾಳು, ತನ್ನ ಹೊಟ್ಟೆ ಹಸಿವಿನಿಂದ ಚುರುಗುಟ್ಟುವಂತಾದೀತೆಂದು ಆಲೋಚಿಸಿ ತಕ್ಷಣ ಮಾತು ಬದಲಾಯಿಸಿ ರಮಿಸುವಲ್ಲಿ ಆತನ ಚಾಣಾಕ್ಷತೆಯಿದೆ.

ಇದೇ ರೀತಿಯ ಇನ್ನೊಂದು ಸನ್ನಿವೇಶ. ಗಂಡ ತನ್ನ ಹೆಂಡತಿಗೆ ಪ್ರೀತಿಯಿಂದ ಕೈಗಡಗ ಮಾಡಿಸಿ ಕೊಟ್ಟಿದ್ದಾನೆ. ಅದಕ್ಕಾಗಿ ಅವನಿಗೆ ಅಭಿಮಾನ. ಹೊರಗಿನಿಂದ ಬಂದ ಆತ ಸರಸಕ್ಕೆಂದು ಕೈಯಲ್ಲಿಯ ನಿಂಬೆಹಣ್ಣನ್ನು ಹೆಂಡತಿಯಮೇಲೆ ಒಗೆದ. ಆದರೆ ಅದು ಕೈತಪ್ಪಿ ತೊಟ್ಟಿಲಲ್ಲಿ ಹಾಯಾಗಿ ಮಲಗಿದ ಮಗುವಿಗೆ ತಟ್ಟಿ ಅದು ಚಂಡಿ ಹಿಡಿಯುತ್ತದೆ. ಬಹಳ ಶ್ರಮವಹಿಸಿ ಲಾಲಿಸಿ ಅಳುತ್ತಿರುವ ಮಗುವನ್ನು ಆಕೆ ಮಲಗಿಸಿದ್ದಳು. ಗಂಡನ ಅಚಾತುರ್ಯದಿಂದಾಗಿ ಅದೆಲ್ಲ ವ್ಯರ್ಥವಾಯಿತು. ಇತ್ತ ಕೆಲಸದ ಒತ್ತಡ, ಮಗುವಿನ ಕಾಟ ಮತ್ತೆ ಆರಂಭ. ಗಂಡನ ಈ ಕೃತ್ಯಕ್ಕೆ ಸಹಜವಾಗಿ ಕೋಪಗೊಂಡು ಕೈಯಲ್ಲಿಯ ಕಡಗವನ್ನು ತೆಗೆದು ಹಾಕುತ್ತಾಳೆ. ಸರಸವಿರಸಕ್ಕೆಡೆ ಮಾಡುತ್ತದೆ. ಇದರಿಂದ ಗಂಡನಿಗೆ ಬೇಸರ. ಹೆಂಡತಿಯ ಮುನಿಸಿನ ಕಾರಣ ತಿಳಿಯದೆ ಕಸಿವಿಸಿಗೊಂಡು ತಾಯಿಗೆ ವಿಚಾರಿಸಿದ. ಆದರೆ ಅವಳಿಗೂ ತಿಳಿಯದು. ಒಟ್ಟಿನಲ್ಲಿ ನಿಜಸಂಗತಿಯನ್ನು ಇಬ್ಬರೂ ತಿಳಿಯರು.

ಸರಸಕ್ಕೆ ಇಟ್ಟಣ್ಣ ಬಿರುಸಾಗಿ ಬೀಳಲು
ತೊಟ್ಟಿಲಿಗೆ ತಗುಳಿ ಮಗನೆದ್ದ। ಕ್ವಾಪಕೆ
ಕಳೆದಿಟ್ಳು ಕೈಯಿನ ಕಡಗವ ॥೧॥

ಕಳೆದಿಟ್ಟ ಕಡಗವ ಕಾಲಲ್ಲಿ ಎತ್ಕಂಡು
ಮನೆಗೆ ಬಂದಾನು ಮಡದೀಯು। ನೋಡಿದನು
ತಾಯಿಯು ಒಂದಪ್ಪಣೆ ಕೇಳಿದನು. ॥೨॥

ಹಾಲನ ಕರೆಯಂದ ಬಾಲನ ತೂಗಂದೆ
ರಾಜ ಮಲ್ಲಿಗೆ ಮುಡಿ ಅಂದೆ। ಕ್ವಾಪಕೆ
ರಾಣಿ ನನ್ ಮ್ಯಾಲೆ ಮುನಿದವಳೆ ॥೩॥

ಹಸುವಾನ ಕರೆಯಂದೆ ಕೂಸುಳೆಯು ತೂಗಂದೆ
ಎಸಳು ಮಲ್ಲಿಗೆಯು ಮುಡಿ ಅಂದೆ। ಕ್ವಾಪಕೆ
ಕುಸುಳೆ ನನ್‌ಮ್ಯಾಲೆ ಮುನಿದವಳೆ ॥೪॥

ದೈನಂದಿನ ಬದುಕಿನಲ್ಲಿ ನಡೆಯಬಹುದಾದ, ನಡೆಯುವ, ನೆನಪಿನಿಂದ ಜಾರಿ ಹೋಗಬಹುದಾದ, ಇಂಥ ಸಣ್ಣ ಸಂಗತಿಯೂ ಜನಪದ ಕವಿಯ ಪ್ರಾತಿಭ ದೃಷ್ಟಿಗೆ ಸಿಲುಕಿ ಅದನ್ನು ಸ್ಥಿರಚಿತ್ರವಾಗಿಸಿರುವ ಕೌಶಲ ಗಮನಾರ್ಹ. ಇಂತಹ ಅನೇಕ ಉದಾಹರಣೆಗಳನ್ನು ಜನಪದಕಾವ್ಯದಿಂದ ಎತ್ತಿಕೊಡಬಹುದು. ಇಲ್ಲಿ ಹೇಳಿದ ಉದಾಹರಣೆಗಳು ಅಂಥ ಕೆಲವು ಮಾತ್ರ. ಶಿಷ್ಟ ಕಾವ್ಯದಲ್ಲಿಯೂ ಕಾಣಲಾರದ ವೈವಿಧ್ಯ, ಸೊಗಸು-ಸವಿ ಜನಪದ ಗೀತಗಳಿದ್ದು.

೫. ವಿವಾಹ ಬಾಹಿರ ಪ್ರಣಯ ಮತ್ತು ಶೃಂಗಾರ

ಜನಪದ ಸಾಹಿತ್ಯ ತನ್ನನ್ನು ತಾನು ತುಂಬ ಪ್ರಾಮಾಣಿಕವಾಗಿ ಪ್ರಕಟಪಡಿಸಿಕೊಳ್ಳುತ್ತದೆ. ತನ್ನ ಸಮಾಜದಲ್ಲಿಯ ರೂಢಿ ಸಂಪ್ರದಾಯಗಳು, ತೊಂದರೆ–ತಾಪತ್ರಯಗಳು, ಸುಖದುಃಖಗಳು ಮುಂತಾದವುಗಳಂತೆಯೆ ನೈತಿಕ ಚೌಕಟ್ಟನ್ನು ಮೀರಿದ ಅಕ್ರಮವಾದ ಪ್ರಣಯ ಪ್ರಸಂಗಗಳು ಅವುಗಳಲ್ಲಿ ತೊಡಗಿಕೊಂಡವರ ತೀವ್ರತೆ. ಕ್ಲೇಶ ಪರಿಣಾಮದ ಭೀಕರತೆಗಳನ್ನು ಕಣ್ಣೆದುರು ನಿಲ್ಲಿಸಿ ದಂಗಾಗುವಂತೆ ಮಾಡುತ್ತವೆ. ಮನುಷ್ಯ ಸ್ವಭಾವದ ದೌರ್ಬಲ್ಯ, ದುಡುಕುಗಳು ಸುಖಾನ್ವೇಷಣೆಯ ಭರದಲ್ಲಿ ಮುಂದಿನ ಪರಿಣಾಮದ ದೂರಗಾಮಿ ದೃಷ್ಟಿಯಿಲ್ಲದೆ ಜಾರಿ ಬಿದ್ದು ಬದುಕನ್ನು ಹಾಳುಮಾಡಿಕೊಂಡ ಪ್ರಣಯಿಗಳ ಕಥೆ ಆ ಕುರಿತಾಗಿ ಗಂಭೀರವಾಗಿ ಚಿಂತನೆಗೊಳಗು ಮಾಡುತ್ತದೆ. ಒಂದು ರೀತಿಯಲ್ಲಿ ಪರೋಕ್ಷವಾಗಿ ಸಮಾಜಕ್ಕೆ ಅವು ನೀತಿ ಪಾಠಗಳೂ ಆಗುತ್ತವೆ.

ಶ್ರೀ ಎಂ.ಸಿ. ವಸಂತಕುಮಾರ್ ಅವರು ಸಂಪಾದಿಸಿರುವ 'ಕೋಲು ಪದಗಳು' ಕೃತಿಯಲ್ಲಿಯ 'ಚಿಕ್ಕಉಂಗುರಕೆ ನಾರಿ ಮನಸೋತಳೋ' ಎನ್ನುವ ಕಥನಗೀತವನ್ನು ಪರಿಶೀಲನೆಗೆತ್ತಿಕೊಳ್ಳಬಹುದು. ಹಳ್ಳಿಯ ಓರ್ವಮುಗ್ಧ ಗೃಹಿಣಿ ತಿರಿದುಣ್ಣುವ ಜೋಗಿಯೊಬ್ಬನಿಗೆ ಮರುಳಾಗಿ ಅವನ ಬೆನ್ನುಹತ್ತಿ ಸರ್ವಸ್ವ'ವನ್ನು ಕಳೆದುಕೊಂಡು ಭ್ರಮನಿರಸನಗೊಂಡ ಕಥೆಯೆ ಇದರ ವಸ್ತು. ಅದರ ವಿವರ ಹೀಗಿದೆ;

ಒಂದು ದಿನ ಕೇರಿಗೆ ಒಬ್ಬ ತರುಣ ಜೋಗಿ ಭಿಕ್ಷಕ್ಕೆ ಬರುತ್ತಾನೆ. ಎಲ್ಲರೂ ಈ ಜೋಗಿಗೆ 'ದಾನ ಧರ್ಮ' ಮಾಡುತ್ತಾರೆ. ಆತ ಎಲ್ಲರ ಮನೆಗೆ ಭಿಕ್ಷಕ್ಕೆ ಹೋದಂತೆ ಈ ಗೃಹಿಣಿ (ಕಥನ ಗೀತದ ನಾಯಕಿ)ಯ ಮನೆಗೂ ಬರುತ್ತಾನೆ. ಇವಳು ಅವನಿಗೆ 'ಪಡಿದಾನ' ನೀಡಲು ಮುಂದೆ ಬಂದಾಗ ಆತ 'ತಂದಿಡೆ ನಾರಿ ಇತ್ತಿತ್ತವ' ಎಂದು ಹತ್ತಿರಬಂದು ನೀಡಲು ಕೇಳುತ್ತಾನೆ. ಆಗ ಆಕೆ ಅದ ಸಾಧ್ಯವಿಲ್ಲ, ಅತ್ತೆಮಾವರು ಕಂಡರೆ ಬೈಯುತ್ತಾರೆನ್ನಲು, ಆ ಜೋಗಿ ಅಷ್ಟಕ್ಕೆ ಬಿಡದೇ ಹೀಗೆನ್ನುವನು :

ಇತ್ತಿತ್ತ ಬಂದರೆ ಅತ್ತೆಮಾವಂದಿರು ಬೈಯಲಿಕ್ಕೆ
ಆನೆ ಸಾಲು ಕದ್ದನೇನೆ ? ಕುದುರೆ ಸಾಲು ಕದ್ದನೇನೆ?
ಹೆರರ ಹೆಣ್ಣಿಗೆ ಸಾ ಬಿದ್ದನೇನೆ ?

ಎಂದು ಪ್ರಶ್ನಿಸುತ್ತ ಮಾತಿಗೆಳೆಯುತ್ತಾನೆ. ಅವನ ಮಾತಿಗೆ ಮರುಳಾದ ಆಕೆ ಅವನ ಬಳಿ ಬಂದು ಪಡಿದಾನ ನೀಡುವಾಗ ಅವನ ಚೆಲುವಿಕೆಯನ್ನು ಸೂಕ್ಷ್ಮವಾಗಿ ಗಮನಿಸಿ ಮನದಲ್ಲೇ ಮೆಚ್ಚುತ್ತಾಳೆ. ವಿಶೇಷವಾಗಿ ಅವನ ಕೈಯಲ್ಲಿಯ ಚಿಕ್ಕ ಯುಂಗುರ ಅವಳನ್ನು ಸೆಳೆಯುತ್ತದೆ. ಇವನೊಂದಿಗೆ ಹೋದರೆ ತನಗೆ ಹೆಚ್ಚಿನ ಸುಖ ಸಿಗುವುದೆಂಬ ಆಶೆ-ಆಮಿಷಕ್ಕೊಳಗಾದ ಆಕೆ ಭಾವೋನ್ಮಾದದ ಭರದಲ್ಲಿ ಹಿಂದುಮುಂದಾವುದನ್ನೂ ಆಲೋಚಿಸದೇ ಇದ್ದುಬಿದ್ದ ಬಟ್ಟೆಬರೆಗಳನ್ನೆಲ್ಲ ಗಂಟು ಮೂಟೆ ಮಾಡಿ ಕಟ್ಟಿಕೊಂಡು ಅವನ ಹಿಂದೆ ಹೊರಟುಬಿಡುತ್ತಾಳೆ.

ಆದರೆ ಅವಳು ಬಯಸಿ ಭಾವಿಸಿದ್ದೇ ಒಂದು. ಅವಳಿಗೆ ದಕ್ಕಿದ್ದೇ ಒಂದು. ಅವನೊಂದಿಗೆ ಗಂಟುಮೂಟೆ ಹೊತ್ತು ಕೊಂಡು ತಿರುಗಾಡಿದ್ದ ಬಂತೇ ಹೊರತು ಅವನದೇ ಆದ ನೆಲೆಯೇ ಅವನಿಗಿಲ್ಲ. ಗುಡ್ಡ, ಬೆಟ್ಟ ಹತ್ತಿ ಇಳಿದು ಸುಸ್ತಾಗು ತ್ತಾಳೆ-ಅವನೊಂದಿಗೆ. ಅವನೊಂದಿಗಿನ ಅವನ ನೆಲೆಯಿಲ್ಲದ ಬದುಕಿನಲ್ಲಿ ತಾನು ಉಂಡುಟ್ಟು ಪಡುವ ಸುಖ ಅಷ್ಟರಲ್ಲಿಯೇ ಇದೆ ಎನ್ನುವ ವಿವೇಕೋದಯವಾಗಿ ತನ್ನ ಸುಖ ಸಂಸಾರವನ್ನು ಬಿಟ್ಟು ಬಂದು ಈ ಜೋಗಿಯ ಬೆನ್ನುಹತ್ತಿ ಎಂಥ ಪ್ರಮಾದ ವೆಸಗಿದೆ ಎಂದು ಗೋಳಾಡುತ್ತಾಳೆ.

ಮುದ್ದಿನಂಥ ಮನೆಯ ಬಿಟ್ಟೆ, ಗೆಜ್ಜೆ ಕಾಲಿನ
ಮಗುವ ಬಿಟ್ಟೆ
ಲಜ್ಜೆಗೆಟ್ಟ ಜೋಗಿ ಕುಟ್ಟೆ ನಾ ಬರಬಹುದೆ
ಎಂಟೂರ ತಿರುಗಿದೆ ಸೊಂಟಕೊಂದು ಅರಿಬಿಲ್ಲ
....
ಬೀಸೋ ತೋಳು ಬೆರಗಾದೊ ನಡೆಯೊ ಕಾಲು
ಹಪ್ಪಳಾದೊ
ಬಾಯ ತಂಬುಲವೆಲ್ಲ ಹುಡಿ ಹುಡಿ.

ಆದರೆ ಈಗ ಅತ್ತರೇನು ? ಪಾಶ್ಚಾತ್ತಾಪದಿಂದ ಬೆಂದು ನೊಂದರೇನು ? ಹಾಳಾದ ಬದುಕು ಮತ್ತೆ ಕೈ ಸೇರಬಹುದೆ ? ಆಕೆಯ ಮೊದಲಿನ ಗಂಡನ ಮುದ್ದು ಮಗುವಿನೊಂದಿಗಿನ ಅಚ್ಚುಕಟ್ಟಾದ ಸುಖ ಸಂಸಾರ ಈಗಿನ ಜೋಗಿಯ ಜೊತೆಗಿನ ನಿರರ್ಥಕ ಹಾಳಾದ ಬಾಳುಗಳೆರಡರ ನಡುವಿನ ಅಂತರ ಅವಳಿ

ಗುಂಟಾದ ಭ್ರಮನಿರಸನ–ಹೀಗೆ ಇವೆಲ್ಲವನ್ನೂ ಏಕಕಾಲಕ್ಕೆ ಅತ್ಯಂತ ಪರಿಣಾಮಕಾರಿಯಾಗಿ ಹಿಡಿದಿಟ್ಟಿದೆ.

ಕೌಟುಂಬಿಕ ಪರಿಸರದಲ್ಲಿ ಅಜಾಗರೂಕತೆಯಿಂದಾಗಿ ದುಡುಕಿನ ಪರಿಣಾಮವಾಗಿ ಸಂಭವಿಸುವ ಇಕ್ಕಟ್ಟು, ಆ ಸಂದರ್ಭದಲ್ಲಿ ಅದನ್ನು ಕುಶಲತೆಯಿಂದ ಬಗೆಹರಿಸುವ ರೀತಿಗೆ 'ಅಕ್ಕನ ಮನೆಯಲ್ಲಿ ತಂಗಿ' ಎನ್ನುವ ಹೆಸರಿನಲ್ಲಿ ಸಂಗ್ರಹಿತವಾದ ಕಥನಗೀತೆ ಉತ್ತಮ ನಿದರ್ಶನ[೧] ಅಕ್ಕನ ಮನೆಗೆ ಬಂದ ತಂಗಿಯ ಜೊತೆಗೆ ಭಾವನ ಸರಸ ಪ್ರಣಯಕ್ಕೆ ತಿರುಗಿ–ಅಕ್ಕನ ಅರಿವಿಲ್ಲದೆ ನಡೆದು ಸಮಸ್ಯೆಯೊಂದನ್ನು ಹುಟ್ಟು ಹಾಕುತ್ತದೆ. ಇದರಿಂದಾಗಿ ತಂಗಿ ಗರ್ಭಿಣಿಯಾದುದು ಅಕ್ಕನ ಅರಿವಿಗೆ ಬರುತ್ತದೆ. ಇದಕ್ಕೆ ಕಾರಣೀಭೂತ ತನ್ನ ಗಂಡ. ಇದರಲ್ಲಿ ತನ್ನ ಅಜಾಗರೂಕತೆಯ ಪಾಲೂ ಇರುವುದನ್ನು ಗಮನಿಸಿದ ಅಕ್ಕ ತಂಗಿಯನ್ನು ತವರೂರಿಗೆ ಕಳುಹಿಸುತ್ತಾಳೆ. ತನ್ನೂರಿಗೆ ಹೊರಟ ತಂಗಿ ಮುಗ್ಧೆ. ತಾನು ಮಗುವಿನ ತಾಯಾಗಿ ಮರಳಿ ನಿನ್ನಲ್ಲಿಗೆ ಪಾಲು ಬೇಡಲು ಬರುವೆನೆಂದು ಭಾವನಿಗೆ ಹೇಳಿದಾಗ, ಇದುವರೆಗೆ ನಾದನಿಯೊಂದಿಗೆ ದೈಹಿಕ ಸುಖವನ್ನನು ಭವಿಸಿದವ ಈ ಮಾತಿಗೆ ಕೆರಳಿ ಕೆಂಡವಾಗುತ್ತಾನೆ ಮರಳಿ ಬಂದರೆ—

ಪಾಲಿಗೆ ಬಂದರೆ ನಾಲಿಗೆ ಸೀಳಿಸುವೆ
ನೋಡೋ ಕಣ್ಣುಗಳ ಇರಿಸುವೆ ಎಲೆಹೆಣ್ಣೆ
ಪಾಲು ನಿನಗೆಲ್ಲಿಂಗೆ ಸಲುವವೆ.

---

೧. ಇದರ ಸುದೀರ್ಘ ವಿಶ್ಲೇಷಣೆಗೆ ನೋಡಿ : ಎಚ್. ಎಸ್. ಕೆ : 'ಜಾನಪದ ಸರಸ್ವತಿ' ಗ್ರಂಥದ 'ಜನಪದ ಕಾವ್ಯದಲ್ಲಿ ಭಾವ-ನಾದಿನಿಯರ ಎರಡು ಪ್ರಸಂಗಗಳು' ಎಂಬ ಲೇಖನ.

ಎಂದು ಬೆದರಿಸುತ್ತಾನೆ. ತನ್ನನ್ನು ತನ್ನ ಸುಖಕ್ಕೋಸುಗ ಮಾತ್ರ ಬಳಸಿಕೊಂಡು ಜವಾಬ್ದಾರಿಯಿಂದ ನುಣುಚಿಕೊಳ್ಳುವ ಸ್ವಾರ್ಥಿ, ಗೋಮುಖವ್ಯಾಘ್ರ ಭಾವನ ಮನಸ್ಸನ್ನರಿತ ತಂಗಿ ನಿರುಪಾಯಳಾಗಿ ಅಕ್ಕ ಸೂಚಿಸಿದ ಎಲೆಯೂರ ಗೌಡನ ಕೈ ಹಿಡಿಯಲು ಸಿದ್ಧಳಾಗುತ್ತಾಳೆ. ಆದರೆ ಗೌಡನಿಗೆ ವಂಚಿಸುವದು ಇಷ್ಟವಿಲ್ಲ ಆಕೆಗೆ. ನಡೆದ ಸಂಗತಿಯನ್ನು ಆತನಿಗೆ ತಿಳಸ ಬೇಕೆಂದು ಅಕ್ಕನನ್ನು ಒತ್ತಾಯಿಸುತ್ತಾಳೆ.

ಎಳೆಬಾಳೆಯೊಳಗೆ ಸುಳಿಬಾಳೆ ಇರುವೋದ
ಎಲೆಯೂರ ಗೌಡ ಅರಿಯನೆ ಅಕ್ಕಯ್ಯ
ಅರಿಯದ ಗಂಡಸಿಗೆ ತಿಳಿಹೇಳೆ ಅಕ್ಕಯ್ಯ

ಇಲ್ಲಿಯ ತಂಗಿಯ ಸಂಕಟ, ತಳಮಳ, ಹೊಯ್ದಾಟ ಗಳೆಲ್ಲ ಸುಸ್ಪಷ್ಟ. ಆದರೆ ಈ ಮಾತಿಗೆ ಅಕ್ಕ ಬೆಲೆಗೊಡುವುದಿಲ್ಲ. ಗೌಡನಿಗೆ ಧಾರೆ ಎರೆಸಿಬಿಡುತ್ತಾಳೆ. ಇಲ್ಲಿಗೆ ಕವಿತೆ ಮುಕ್ತಾಯ. ವಯಸ್ಸಿಗೆ ಬಂದ ಯುವತಿ ಆಕರ್ಷಣೆಯ ಸುಳಿಯಲ್ಲಿ ಸಿಕ್ಕು-ಒದ್ದಾಡುವ, ಗಂಡಿನ ಸ್ವಾರ್ಥ, ನೀಚಬುದ್ಧಿ, ಅಕ್ಕನ ವ್ಯವ ಹಾರ ಕುಶಲತೆಗಳೆಲ್ಲವನ್ನೂ ಈ ಕಥನ ಗೀತೆ ಸುಂದರವಾಗಿ ಸಾಂಕೇತಿಕವಾಗಿ ವಿದಿತಪಡಿಸುತ್ತದೆ.

ಲಾವಣಿಗಳಲ್ಲಿಯೂ ವಿವಾಹ ಬಾಹಿರ ಪ್ರಣಯಚಿತ್ರಣ ಅದರ ದುರಂತ ಪರಿಣಾಮದ ತೀವ್ರತೆಯೊಂದಿಗೆ ಕಾಣ ದೊರೆ ಯುತ್ತದೆ. ವಿಶೇಷವಾಗಿ ಇಂಥಹ ನಿಷಿದ್ಧವಾದ ಪ್ರಣಯ ದಲ್ಲಿತೊಡಗಿದ ಹೆಣ್ಣುಗಂಡುಗಳಲ್ಲಿ ಹೆಣ್ಣು ಪೆಟ್ಟು ತಿಂದು ತನ್ನ ಸರ್ವಸ್ವವನ್ನೆಲ್ಲ ಹಾಳುಮಾಡಿಕೊಂಡು ಗೋಳಿಡಿವ

ಚಿತ್ರ ಪುರುಷ ಪ್ರಧಾನ, ಸಾಮಾಜಿಕ ಪರಿಸರದಲ್ಲಿ ಅನಿವಾರ್ಯವೆಂಬಂತೆ ತೋರುತ್ತದೆ. ಸಿಂಪಿ ಲಿಂಗಣ್ಣ ಅವರು 'ಜೀವನ ಸಂಗೀತ"ದಲ್ಲಿ–ಸಂಪಾದಿಸಿದ ಒಂದೆರಡು ಶೃಂಗಾರ ಲಾವಣಿಗಳನ್ನು ಇದಕ್ಕೆ ಉದಾಹರಣೆಯಾಗಿ ಪರಿಶೀಲನೆಗೆ ಎತ್ತಿಕೊಳ್ಳಬಹುದಾಗಿದೆ.

ಅತಿ ಕಾಮಿಯಾದ ವಿವಾಹಿತ ತರುಣಿಯೋರ್ವಳು ಸುಂದರ ಪರ ಪುರುಷನೊಬ್ಬನಿಗೆ ಮನಸೋತು ಅವನನ್ನು ಪ್ರಣಯಕ್ಕಾಹ್ವಾನಿಸುತ್ತಾಳೆ. ಅವನ ರೂಪ, ಶರೀರಸೌಷ್ಠವ ಆಕೆಗೆ 'ಹುಚ್ಚು' ಹಿಡಿಸುತ್ತದೆ, ಸ್ವನಿಯಂತ್ರಣವನ್ನು ಕಳೆದುಕೊಳ್ಳುತ್ತಾಳೆ ಆಕೆ.

ಸಂಪಿಗೆ ತೆನಿಯಂಥ ಹುಡುಗ। ಸಂತ್ಯಾಗ್ನಾಯ್ದು
ಹೋಗ್ತಾನ
ಹಂತಿಲ್ಹೋಗಿ ಕೇಳಲೇನ ಹೆಸರ
ನನ್ನ ಕಾಂತನ ರೂಪ ಹೊಟ್ಟಿಂಗ ಹುಣ್ವಿ ಚಂದರ
ಇವನ ಚಿಂತಿಯೊಳಗ ಜೀವಕ್ಕಿಲ್ಲ ಸ್ಥಿರಾರ।

ಆತನೊಡನಾಟದ ಸೌಖ್ಯದ ಆಶೆಯಲ್ಲಿ ಉತ್ಕಟಳಾದ ಆಕೆ ಮನೆಮಾರುಗಳನ್ನು ನೀತಿ-ಅನೀತಿಗಳನ್ನು ಮರೆತು ನೇರವಾಗಿ ಅವನೆದುರಿಗೆ ತನ್ನ ಮನದ ಆಶೆಯನ್ನು ವಿವರಿಸುತ್ತಾಳೆ. ಆಕೆಯ ಈ ಆಕ್ರಮ ಬಯಕೆಯನ್ನಾತ ತಿರಸ್ಕರಿಸಿ ಬುದ್ಧಿ ಹೇಳುತ್ತಾನೆ. ಪರಸ್ತ್ರೀ ವ್ಯಾಮೋಹದಿಂದ ಹಾಳಾದ ಬ್ರಹ್ಮ, ಇಂದ್ರ, ರಾವಣರ ಕಥೆ ನೆನಪಿಸುತ್ತಾನೆ. ಆದರೆ ಉನ್ಮಾದವಶಳಾದ ಆಕೆಗೆ ಉಪದೇಶವೆಲ್ಲಿ ಹಿಡಿಸೀತು ? 'ನೀ ಗಂಡಸಾದರ

ಹೌದಲ್ಲೋ' ಎಂದು ಅವನ ಪುರುಷತ್ವಕ್ಕೆ ಸವಾಲು ಹಾಕಿ ನೀ ಒಲಿಯದಿದ್ದರೆ ಪ್ರಾಣಕೊಟ್ಟು ಜೈಲಿಗೆ ಕಳುಹಿಸುವೆ-ಎಂದು ಬೆದರಿಸುತ್ತಾಳೆ. ಈ ಮಾತುಗಳಿಂದ ಪ್ರಚೋದಿತನಾಗಿ ಕೆರಳಿದ ಆತ ಆಕೆಗೆ ಸರಿಯಾದ ಪಾಠಕಲಿಸಬೇಕೆಂದು ನಿಶ್ಚಯಿಸಿ ಅಂದು ರಾತ್ರಿ ಯಾರೂ ತಿಳಿಯದಂತೆ ಊರ ಹೊರಗಿನ ಧರ್ಮಶಾಲೆಗೆ ಬರಲು ಹೇಳುತ್ತಾನೆ. ಅಂತೂ ತನ್ನ ಮನೋಭಿಷ್ಟ ಪೂರೈಸುವಂತಾಯಿತೆಂದು ಹಿಗ್ಗಿದ ಆಕೆ.

ಅತ್ತಿ ಮಾವ ಗಂಡಗ ಣಿಸಿ । ಎಲ್ಲಾರಿಗಿ ಮಲಗಿಸಿ
ಆರು ತಾಸ ರಾತ್ರೀಗಿ ಹೊರಟಾಳ ಅವಸರ ।

ಧರ್ಮಶಾಲೆಯಲ್ಲಿ ತನ್ನ ಇನಿಯನಿರುವನೆಂಬ ಭರದಲ್ಲಿ ತವಕದಿಂದ ಹೋಗಿ ಅಲ್ಲಿ ಮಲಗಿದ ಪುರುಷನೊಬ್ಬನನ್ನು ಕತ್ತಲೆಯಲ್ಲಿ ತನ್ನಿನಿಯನೇ ಎಂದು ಎಬ್ಬಿಸುತ್ತಾಳೆ. ಆದರೆ ಅವನೊಬ್ಬ ದಾರಿಕಾರ. ಎಚ್ಚತ್ತ ಅವನು ತನ್ನೊಡನೆ ಅಲ್ಲಿ ತಂಗಿದ್ದ ತನ್ನ ಸಂಗಡಿಗರನ್ನು ಎಬ್ಬಿಸುತ್ತಾನೆ. ಅವರೆಲ್ಲರ ಕೈಗೆ ಸಿಕ್ಕ ಆಕೆ ಪಡಬಾರದ ಪಡಿಪಾಟಲು ಪಡುತ್ತಾಳೆ. ಮರು ದಿನ ಅವರು ಅವಳನ್ನು ತಮ್ಮೂರಿಗೆ ಒಯ್ಯುತ್ತಾರೆ. ಗಂಡನಿಗೆ ಈ ಸುದ್ದಿ ತಿಳಿದು ಆಕೆಯೊಂದಿಗಿನ ಸಂಬಂಧವನ್ನು ಕತ್ತರಿಸಿ ಹಾಕುತ್ತಾನೆ. ಇತ್ತ ತಾನು ಬಯಸಿದ ಗೆಳೆಯನೂ ಸಿಗದೆ ತನ್ನ ಮಾನ-ಮರ್ಯಾದೆಯೂ ಹಾಳಾಗಿ ಇದುವರೆಗಿನ ಸುಂದರ ಬದುಕು ನುಚ್ಚುನೂರಾಗಿ ಕಣ್ಣೀರಿಡುವಂತಾಗುತ್ತದೆ. ಇಲ್ಲಿಗೆ ಲಾವಣಿ ಕೊನೆಗೊಳ್ಳುತ್ತದೆ. ಆಕೆಯ ಮುಂದಿನ ಗತಿಯಂತೂ ಅತಿ ದಾರುಣವಾದದ್ದು. ಒಂದು ಸೂಳೆಯಾಗಿ ಕಾಲ ನೂಕುವದು. ಇಲ್ಲ ಸಾಯುವದು. ಸಾಮಾಜಿಕ ನೈತಿಕ ಆದೇಶ

ಗಳನ್ನು ಲಘುವಾಗಿ ಗಣಿಸಿ ಆವೇಶಭರದಲ್ಲಿ ದುಡುಕಿ ಕುರುಡು ಕಾಮದ ಸುಳಿಗೆ ಸಿಕ್ಕಿದ ವಿವಾಹಿತ ತರುಣಿಯು ಕಥೆಯು ಕೊನೆಯು ಪರಿಣಾಮ ಓದುಗರ ಮನ ಕಲುಕುವಲ್ಲಿ ಅತ್ಯಂತ ಸಫಲವಾಗಿದೆ.

'ಜೀವನ ಸಂಗೀತ'ದಲ್ಲಿಯೇ ಸಂಗ್ರಹಿತವಾದ 'ಚೇದುಣಿ' ಹೆಸರಿನ ಲಾವಣಿಯೂ ಇಂಥದೇ ಸಂದರ್ಭದ ದಾರುಣ ಚಿತ್ರ ವನ್ನೊದಗಿಸುತ್ತದೆ, ಮೇಲಿನ ಲಾವಣಿಯಲ್ಲಿ ವಿವಾಹಬಾಹಿರ ಪ್ರಣಯಕ್ಕೆ ತನ್ನನ್ನು ಒಡ್ಡಿಕೊಂಡವಳು ಹೆಣ್ಣಾದರೆ, ಇಲ್ಲಿ ಗಂಡು ಓರ್ವ ವಿವಾಹಿತ ಸ್ತ್ರೀಯನ್ನು ಅವಳೊಡನೆ ಅವಳ ಮದುವೆಗೆ ಮೊದಲು ಇದ್ದ ಸತಿಗೆ-ಸ್ನೇಹದ ಬಲದಿಂದ-ಪ್ರಣಯಕ್ಕೆ ಆಹ್ವಾನಿಸುತ್ತಾನೆ. ಆದರೆ ಆವಳು ಮೊದ ಮೊದಲಿಗೆ ನಿರಾಕರಿಸಿದರೂ, ಅವನ ಬಲವಂತಕ್ಕೆ ಬಾಲ್ಯದ ಅವನೊಡನಿದ್ದ ಸ್ನೇಹದ ನೆನಪು ಮಾಡಿಕೊಟ್ಟು ಒಲಿಯುವಂತೆ ಮಾಡುವಲ್ಲಿ ಅತ ಸಫಲನಾಗುತ್ತಾನೆ. ಕೆಲಕಾಲ ಅವಳೊಡನೆ ಕಳ್ಳಪ್ರಣಯದ ಸುಖವನ್ನು ಅನುಭವಿಸಿ ಇದು ಹೆಚ್ಚಾದರೆ ತನಗೆ ಅವಳ ಗಂಡನಿಂದ ಅಪಾಯ ಒದಗೀತೆಂಬ ಅಳುಕಿನಿಂದ ಹಿಂದೇಟು ಹಾಕುತ್ತಾನೆ. ಆದರೆ ಈಗಾಗಲೆ ಕಳ್ಳಪ್ರಣಯದ ಉನ್ಮಾದ ತಲೆಗೇರಿದ ಆಕೆ ತನ್ನ ಕಾರ್ಯದಲ್ಲಿ ಗಂಡ, ಮಾವ ಇಬ್ಬರೂ ಅಡ್ಡಿಯಾಗುವರೆಂದು ಅವರಿಗೆ ವಿಷ ಪ್ರಾಶನ ಮಾಡಿಸಿ ಕೊಲ್ಲುವದಕ್ಕೂ ಹೇಸುವದಿಲ್ಲ. ಅವರನ್ನೂ ಕೊಲೆ ಗೈದು ತನ್ನ ದಾರಿ ನಿರಾತಂಕವಾಯಿತೆಂದು ತನ್ನ ಗೆಣೆಯನ ಕಡೆಗೆ ಧಾವಿಸುತ್ತಾಳೆ. ಆದರೆ ಆಕೆಯು ಈ ವ್ಯವಹಾರ ಕಂಡು ಒಂದಿಲ್ಲೊಂದು ದಿನ ತನಗೂ ಈಕೆಯಿಂದ ಇಂಥದೇ ಗತಿ

ಒದಗೀತೆಂದು ಊಹಿಸಿ ಆತ ಅವಳನ್ನು ತಿರಸ್ಕರಿಸುತ್ತಾನೆ. ಹೀಗೆ ವ್ಯಭಿಚಾರಕ್ಕಿಳಿದು ಅದರ ಉನ್ಮಾದದಲ್ಲಿ ಮಾಡಬಾರದ್ದನ್ನೆಲ್ಲ ಮಾಡಿ ಎಲ್ಲವನ್ನೂ ಕಳೆದುಕೊಂಡು ಕೈಹೊತ್ತು ನಿಲ್ಲುತ್ತಾಳೆ.

ಈ ಲಾವಣಿಯಲ್ಲಿ ವಿವಾಹಬಾಹಿರ ಪ್ರಣಯಕ್ಕೆ ಮೊದಲಿಗೆ ಕಾರಣೀಭೂತನಾದವನು ಗಂಡಸಾದರೂ ಇದರಲ್ಲಿ ಆತ ಅದರ ಯಾವುದೇ ಬಿಸಿ ತಟ್ಟದೆ ಪಾರಾಗುತ್ತಾನೆ. ಆದರೆ ಅವನಿಗೆ ತನ್ನನ್ನು ಪೂರ್ತಿಯಾಗಿ ಒಪ್ಪಿಸಿಕೊಟ್ಟು ಮಾರ್ಗದಲ್ಲಿಯ ಕಂಟಕಪ್ರಾಯರಾದ ಗಂಡ ಮಾವರಿಬ್ಬರನ್ನು ನಿರ್ದಯವಾಗಿ ಕೊಂದು ಬರುವದಕ್ಕೂ ಹಿಂಬು ಮುಂದು ನೋಡದ ಹೆಣ್ಣಿನ ನಡವಳಿಕೆ ಮನುಷ್ಯನ ಸ್ವಾರ್ಥ, ನೀಚತನಕ್ಕೆ ಹಿಡಿದ ಕನ್ನಡಿಯಾಗುತ್ತದೆ. 'ಕಾಮ' ಸಾಮಾಜಿಕ ಆದೇಶಗಳನ್ನು ಮೀರಿ ಪ್ರವಹಿಸಿದಾಗ ಉಂಟಾಗುವ ದುರಂತದ ತೀವ್ರತೆ, ಅದರ ಅದಮ್ಯತೆ– ಎಲ್ಲವನ್ನೂ ಈ ಲಾವಣಿ ಚೆನ್ನಾಗಿ ಮನಗಾಣಿಸುತ್ತದೆ. ಕೊನೆಗೂ ಇಂಥ ಸಂದರ್ಭದಲ್ಲಿ ಗಂಡಿನ ಜವಾಬ್ದಾರಿಯೂ ಎಷ್ಟೇ ಪ್ರಧಾನವಾಗಿದ್ದರೂ ನಮ್ಮ ಸಾಮಾಜಿಕ ಪರಿಸರದಲ್ಲಿ ಹೆಣ್ಣು ದುರಂತದ ತೀವ್ರ ಪರಿಣಾಮವನ್ನು ಅವಳಷ್ಟೆ ಅನುಭವಿಸುವುದು ಪುರುಷ ಪ್ರಧಾನ ಸಮಾಜದಲ್ಲಿ ಸಹಜವಾದುದು.

ವಿವಾಹಬಾಹಿರ ಸಂಬಂಧಗಳಲ್ಲಿ ಪ್ರೇಮದ ಪಾಲಿಗಿಂತ ಕಾಮದ ಕೈವಾಡವೇ ಅಧಿಕ. ಸಾಮಾಜಿಕ ಕಟ್ಟು ಪಾಡುಗಳು ಎಷ್ಟೇ ಕಟ್ಟುನಿಟ್ಟಿನವಾಗಿದ್ದರೂ ಕಾಮದ ಅದಮ್ಯತೆ, ಅದರ ಸುಳಿಯಲ್ಲಿ ಸಿಕ್ಕು ಒದ್ದಾಗುವ ಪಾತ್ರಗಳು, ವಿವಾಹ ಬಾಹಿರ

ಪ್ರಣಯ ತರುವ ಭಗ್ನತೆ, ದುಃಖ, ದುರಂತಗಳೆಲ್ಲವನ್ನೂ ಶಕ್ತವಾಗಿ ಜನಪದ ಗೀತೆಗಳು ಹಿಡಿದಿಡುವ ಜೊತೆಗೆ ಸಾಮಾಜಿಕ ಕೌಟುಂಬಿಕ ಮೌಲ್ಯಗಳಿಗಿರುವ ಬೆಲೆಯನ್ನೂ ಅವುಗಳನ್ನು ಕಡೆ ಗಣಿಸುವುದರಿಂದಾಗುವ ಅಪಾಯಗಳೆರಡನ್ನೂ ಏಕಕಾಲಕ್ಕೆ ಧ್ವನಿಸುತ್ತವೆ. ಇಂತಹ ಇನ್ನೂ ಅನೇಕ ಚಿತ್ರಗಳನ್ನು ಜನಪದ ಗೀತೆಗಳಲ್ಲಿ ಕಾಣಬಹುದಾಗಿದೆ.

ವಿವಾಹಬಾಹಿರ ಸಂಬಂಧಗಳಲ್ಲಿ ವೈವಾಹಿಕ ಜೀವನದಲ್ಲಿರುವ ಭದ್ರತೆ ಇರುವುದಿಲ್ಲ. ಹೀಗಾಗಿ ಅವು ಏರ್ಪಟ್ಟಷ್ಟೆ ತೀವ್ರ ಗತಿಯಲ್ಲಿ ಕಡಿದು ಹೋಗಲೂಬಹುದು. ಹೀಗಾಗಿ ಅವುಗಳಲ್ಲಿ ತೊಡಗಿಕೊಂಡವರ ಪಾಲಿಗೆ ಹೊಯ್ದಾಟ, ತವಕ–ತಲ್ಲಣ, ಆತಂಕ, ಅಗಲಿಕೆಯ ಭಯಗಳು ತಪ್ಪಿದ್ದಲ್ಲ. ವಿವಾಹವಾಗಿಯೂ ವೈವಾಹಿಕ ಚೌಕಟ್ಟನ್ನು ಮೀರಿ ಅಕ್ರಮ ಸಂಬಂಧಗಳು ಏರ್ಪಡು ವಲ್ಲಿ ಕಾರಣಗಳು ಹಲವಾರು; ತನ್ನ ಮನಸ್ಸೊಪ್ಪದ ಆದರೆ ಹಿರಿಯರ ನಿರ್ಬಂಧಕ್ಕೊಳಗಾಗಿ ಅನಿವಾರ್ಯವಾಗಿ ಕೈಹಿಡಿದ ಗಂಡನಲ್ಲಿಯೊ ಅಥವಾ ಹೆಂಡತಿಯಲ್ಲೊ ಅನುರೂಪ ದಾಂಪತ್ಯ ಜೀವನ ಸಾಧ್ಯವಾಗದೆ ಹೋದ ಸಂದರ್ಭದಲ್ಲಿ ಸುಪ್ತಕಾಮನೆಗಳು ತೃಪ್ತವಾಗದೆ ತಪ್ತಗೊಂಡಾಗ ತಾವು ನೈತಿಕ ಎಲ್ಲೆಕಟ್ಟುಗಳನ್ನು ಮೀರಿ ಹರಿಯುವುದೂ ಉಂಟು. ಹೀಗೆ ಅತೃಪ್ತ ಕಾಮವೊ ಅತಿ ಕಾಮವೊ ವಿರಸ ದಾಂಪತ್ಯಗಳೊ ಒಟ್ಟಿನಲ್ಲಿ ವಿವಾಹಬಾಹಿರ ಸಂಬಂಧಗಳಿಗೆ ಕಾರಣಗಳಾಗಬಹುದು. ಅಂಥ ಅಕ್ರಮ ಪ್ರಣಯ ದಲ್ಲಿ ತೊಡಗಿ ಯಾವುದೊ ಕಾರಣದಿಂದ ಅಗಲುವ ಸಂದರ್ಭ ವೊದಗಿ ಆ ಅಗಲಿಕೆ ಶಾಶ್ವತವೂ ಆಗಿರುವುದರಿಂದ ಉಂಟಾ ಗಿರುವ ವಿರಹ ವೇದನೆಯ ತೀವ್ರತೆಯ ಚಿತ್ರವಿಲ್ಲಿದೆ :

ಸುಣಕಲ್ಲು ಕುದಿವಾಗ ಸುಣಕಲ್ಲು ಕುದಿವಾಗ
ನಿನಕಣ್ಣು ನನಮ್ಯಾಲೆ ನನಕಣ್ಣು ನಿನಮ್ಯಾಲೆ
ಜಾಲ ತುರುಬಿನ ಮೇಲೆ. ಕಟ್ಟಿನಸುಗೆಯ ಮೇಲೆ
ಕಣ್ಣಿಟ್ಟ ಸುಗುಣ ಹೋಗತೀನ್ ಹಂಬಲ ಮರೆಯೊ
ಪೋಗತೀನ್ ಹಂಬಲ ಮರೆ ನನ್ನ ಸುಗುಣ.

ಹೊತ್ತಾಯ್ತು ಹೋದೀನೇಳು
ಹಬ್ಬ ಜಾತುರೆ ಒಳಗೆ ಹಗೆಯರಂಗಿದ್ದೆವಲ್ಲೊ
ತೇರು ಜಾತುರೆ ಒಳಗೆ ಸೇರದಂಗಿದ್ದೆವಲ್ಲೊ
ಪಣ್ಣುತುಪ್ಪದಂಗೆ ಪೊಂದಿತ್ತು ಗೆಳತಾನ
ಎಣ್ಣೆಸೀಗೆ ಅಂಗೆ ಅಗಲ್ಹೋಗ್ತಿವಲ್ಲೊ
ಪೋಗತ್ತೀನ ಹಂಬಲ ಮರಿಯೊ.

ಪ್ರಣಯದ ತೀವ್ರತೆಯನ್ನು ಸುಣ್ಣದ ಕಲ್ಲು ಕುದಿಯುವುದಕ್ಕೂ ಅಗಲಿಕೆಯನ್ನು ಎಣ್ಣೆಸೀಗೆಗೂ ಹೋಲಿಸಿರುವಲ್ಲಿಯೂ ಶೃಂಗಾರದ ಆಧಿಕ್ಯವಿದೆ.

ತನ್ನನ್ನು ಪೂರ್ತಿಯಾಗಿ ಅರ್ಥ ಮಾಡಿಕೊಂಡು ತನ್ನ ಬೇಕು-ಬೇಡಗಳನ್ನರಿತು ಹೇಳುವ ಮೊದಲೆ ಅವುಗಳನ್ನು ಪೂರೈಸಿ ತನ್ನೊಂದಿಗೆ ಇಡಿಯಾಗಿ ಸಹಸ್ಪಂದಿಸಿದ ಪುಲಕಿತಗೊಳಿಸಿದ ತನ್ನ ಹೆಣ್ತನದ ಅರ್ಥಪೂರ್ಣತೆಯನ್ನು ಅನುಭವಿಸುವಂತೆ ಮಾಡಿದ ಗೆಳೆಯನ ಅಗಲಿಕೆ ಅತೀವ ವೇದನೆಯನ್ನುಂಟು ಮಾಡುತ್ತಿದ್ದು, ಆತನೊಡನಾಟದ ಒಂದೊಂದು ಚಿತ್ರಗಳೂ ಕಣ್ಮುಂದೆ ಸುಳಿದು ಚಿತ್ತವನ್ನು ಕಲಕಿಬಿಟ್ಟಿವೆ. ಅವನನ್ನು ಬಿಟ್ಟಿರಲಾಗದೆ ಸೇರಲಾಗದೆ ಮರೆಯಲೂ ಆಗದೆ ಮನ

ದೊಳಗೆ ಕುದಿವ ತರುಣಿಯ ಭಾವನೆಗಳು ನೇರವಾಗಿ ಪ್ರಕಟಗೊಂಡ ರೀತಿ ಇಲ್ಲಿಯದು :

ಏಸಾದಿನೆಂದು ಮರೆಯಲೊ-ಸಲ್ಲನ ದಾರಿ
ಯಾವ ಕಾಲೆಂದು ಮರೆಯಲೊ
ಯೇಸು ದಿನ ಮರೆಯಲಿ
ನೀಸಲಾರದ ಹೆಣ್ಣು ಜನ್ಮ
ಗಾಸ್ಮಾಡಿ ಗದ್ದವ ಕಡಿದು
ಪೂಸ್ಮಾಡಿ ಬೆಲ್ಲವ ಕೊಟ್ಟು
ಲೇಸು ಮಾಡಿ ಹೋದಾನಾ, ಏಸದಿನೆಂದು ಮರೆಯಲೊ ॥ಪ॥

ಬಾಚ್ ಬಾಚ್ ಬಕ್ಕಲೆ ತೆಗೆದು
ಜಾಡಿಸಿ ತುರುಬನೆ ಬಿಗಿದು
ಮುದ್ದು ಮುಖವ ನೋಡಿ
ಮೂಗುತಿ ತಂದಿಟ್ಟನಾ, ಏಸದಿನೆಂದು ಮರೆಯಲೊ......

ಕಾಲ್ನೋಡಿ ಕಾಲಪಿಲ್ಲಿ ಶಂದ
ತೋಳ್ನೋಡಿ ತೋಳ್ಬಂದಿ ತಂದ
ಸಣ್ಣ ಸೀರೆಯ ತಂದು
ಹೆಣ್ಣು ಮಾಡಿ ಹೋದನಾ, ಏಸದಿನೆಂದು ಮರೆಯಲೋ...

ವಾರ್ ವಾರ್ ಮಂಚಕೆ ಬರುವ
ಗೀರ್ ಗೀರ್ ಗಂಧವ ತರುವ
ಖಾರೇ ಮಂಚದ ವ್ಯಾಲೆ
ಹೀರಿಪ್ಪೆ ಮಾಡಿ ತನುವ
ಸೂರೆ ಮಾಡಿ ಹೋದನಾ, ಏಸದಿನೆಂದು ಮರೆಯಲೊ......

ಪುಟ್ ಪುಟ್ ಮಂಚಕೆ ಬರುವ
ಬಟ್ ಬಟ್ ಗಂಧಾವ ತರುವ
ಬಟ್ಟ್ಯಾಗುಟದ ಮೇಲೆ ಬಟ್ಟಿಟ್ಟು ಹೋದಾನಾ ಏಸದಿನೇನು
ಮರೆಯಲೊ......

ವಾಚ್ಯವಾದರೂ ತನ್ನ ಒಳತೋಟಿಯನ್ನು ಬಿಚ್ಚು ಮನಸ್ಸಿನಿಂದ ಹೊರತೋರುವಲ್ಲಿ ವಿಪ್ರಲಂಬ ಶೃಂಗಾರ ಹರಳುಗೊಂಡಿದೆ.

೬. ದೈವೀಪ್ರೇಮ ಮತ್ತು ಶೃಂಗಾರ

ಜನಪದ ಗೀತಗಳಲ್ಲಿಯ ಶೃಂಗಾರಮುಖವನ್ನು ಗಮನಿಸುವಾಗ ಜನಪದ ದೇವ-ದೇವತೆಗಳ ಶೃಂಗಾರ ಜೀವನದ ರಸ ಚಿತ್ರಣ ವಿಶೇಷವಾದ ಆಕರ್ಷಣೆಯನ್ನುಂಟುಮಾಡುತ್ತದೆ. ದೇವ-ದೇವತೆಗಳಲ್ಲಿ ಪರಸ್ಪರ ಸಂಬಂಧಗಳನ್ನು ಕಲ್ಪಿಸಿ ಪ್ರಣಯದ ಆಟಕ್ಕೆ ಹಚ್ಚಿ ಅವರಲ್ಲಿ ಮಾನವ ಸಹಜ ಎಲ್ಲ ಭಾವ. ರಾಗಗಳನ್ನು ಆರೋಪಿಸುವ ಅಂಶ ಅತ್ಯಂತ ಕುತೂಹಲಕಾರಿಯಾದುದು. ಈ ದಿಶೆಯಲ್ಲಿ ಕುಸುಮಾಲೆ-ಬಿಳಿಗಿರಿರಂಗ ಶಿವ-ಗಂಗೆ, ನಂಜುಂಡ-ಚಾಮುಂಡಿ, ಚುಂಚನಗಿರಿಯ ಭೈರವ-ಮಾಳವ್ವ. ಮೇಲುಕೋಟೆಯ ಚೆಲುವರಾಯಸ್ವಾಮಿ-ವರನಂದಿ ಈ ಪ್ರಸಂಗಗಳನ್ನು ಜನಪದ ಕವಿಗಳು ಚಿತ್ರಿಸುವ ಬಗೆಯನ್ನು ಕಂಡಾಗ ತಮ್ಮ ಸಮಾಜದ ಗಂಡು-ಹೆಣ್ಣಿನ ಸಂಬಂಧಗಳ ರೀತಿಯಲ್ಲಿಯೇ ಅವುಗಳನ್ನು ವರ್ಣಿಸಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಒಬ್ಬ ಅಧಿಕೃತ ಹೆಂಡತಿಯಿದ್ದೂ ಇನ್ನೊಬ್ಬಳಿಗೆ

ಮನಸೋತು ಕಳ್ಳಪ್ರಣಯ ನಡೆಸುವುದು. ಅದು ಬಹಿರಂಗ ಗೊಂಡು ಮೊದಲಿನವಳಿಂದ ಉಂಟಾಗುವ ಪೇಚಿನ ಪ್ರಸಂಗ, ಜಗಳ, ಗೊಂದಲ ಕೊನೆಗೆ ಅನಿವಾರ್ಯವಾಗಿ ಹೊಂದಿಕೊಳ್ಳು ವಿಕೆ–ಇವು ವಿಶೇಷವಾಗಿ ಎದ್ದು ಕಾಣುವ ಅಂಶಗಳು. ಜನಪದರ ದೈವಭಕ್ತಿ ಈ ರೀತಿಯ ಸಲಿಗೆ ಆತ್ಮೀಯತೆ ಭಾವುಕತೆಗಳಿಂದ ಬಣ್ಣಗೊಂಡಿರುವಂಥದು. ಬಿಳಿಗಿರಿರಂಗ ಒಲಿದದ್ದು ಅರಣ್ಯ ವಾಸಿಗಳಾದ ಸೋಲಿಗರ ಹೆಣ್ಣು ಕುಸುಮಾಲೆಗೆ, ಆದಿಚುಂಚನ ಗಿರಿಯ ಭೈರವನೊಲಿದ ಮಾಳವ್ವ ಕುರುಬಿತಿ. ಮೇಲುಕೋ ಟೆಯ ಚೆಲುವರಾಯಸ್ವಾಮಿ ಒಲಿದ ವರನಂದಿ ಮುಸ್ಲೀಮ ಹೆಣ್ಣು, ಶಿವನೊಲಿದ ಗಂಗೆ ಬೆಸ್ತರವಳು–ಈ ಸಂಬಂಧಗಳಲ್ಲಿ ಹೆಣ್ಣುಗಳು ಸಾಮಾಜಿಕವಾಗಿ ಕೆಳವರ್ಗದವರಾಗಿರುವುದು ಹಾಗೂ ಅವರು ಉಪಪತ್ನಿಯ ಸ್ಥಾನಮಾನಗಳನ್ನು ಪಡೆಯು ವುದು-ವಿಲೋಮ ವಿವಾಹವನ್ನು ಜನಪದ ಸಮಾಜ ದೇವತೆಗಳ ವಿಷಯದಲ್ಲಿ ಕಲ್ಪಿಸಿರುವುದು ಗಮನಾರ್ಹವಾಗಿದೆ. ಇಲ್ಲಿ ಇಂಥ ಒಂದೆರಡು ಉದಾಹರಣೆಗಳನ್ನು ಸಮೀಕ್ಷಿಸಲಾಗಿದೆ.

ಸೋಲಿಗರ ಹೆಣ್ಣು ಕುಸುಮಾಲೆಯ ಚೆಲುವಿಗೆ ಮಾರು ಹೋದ ರಂಗಯ್ಯ ದಾಸಯ್ಯನ ವೇಷ ಹಾಕಿಕೊಂಡು ಕೈಯಲ್ಲಿ ಜಾಗಟೆ ಶಂಖ ಹಿಡಿದು ಕುಸುಮಾಲೆ ಇದ್ದ ಮನೆಗೆ ಬರುತ್ತಾನೆ. ಕುಸುಮಾಲೆಯ ತಂದೆ ಗೌಡನಿಗೆ ಏಳು ಹೆಣ್ಣು ಏಳು ಗಂಡು ಮಕ್ಕಳು ಕುಸುಮಾಲೆಯೆ ಕೊನೆಯವಳು. ದೊಡ್ಡ ಸಂಸಾರದ ಈ ಮನೆಗೆ ದಾಸಯ್ಯನ ವೇಷದ ರಂಗಯ್ಯ ಬಂದಾಗ ಸಂಜೆ ಯಾಗುತ್ತದೆ. ತಂಗುವದಕ್ಕೆ ಜಾಗ ಕೇಳಿದಾಗ ಗೌಡ ಒಪ್ಪುವು ದಿಲ್ಲ. ಆಗ ದಾಸಯ್ಯ ಶಂಖ ಜಾಗಟೆಗಳನ್ನಾದರೂ ಇಡಲು

ಜಾಗ ಕೊಡಲು ಕೇಳಿದಾಗ ಗೌಡ ಸಮ್ಮತಿಸುತ್ತಾನೆ. ಊಟವೂ ಅಲ್ಲಿಯೆ ಆಗುತ್ತದೆ. ಆದರೆ ಒಂದು ವಿಸ್ಮಯ ನಡೆಯುತ್ತದೆ. ಶಂಖ ಮತ್ತು ಜಾಗಟೆ ನುಡೀ "ಏಳ್ಪಟ್ಟಿಜಾಗ" ವನ್ನೆಲ್ಲ ಒಳ ಗೊಳ್ಳುತ್ತದೆ. ಹೀಗಾಗಿ ಗೌಡನ ಮನೆಯುವರೆಲ್ಲ ಹೊರಗೆ ಬಂದು ಮಲಗುತ್ತಾರೆ. ಕಿರಿಯುವಳಾದ ಕುಸುಮಾಲೆ ಮಾತ್ರ ತಪ್ಪಿಸಿಕೊಂಡು ಮನೆಯೊಳಗಿನ ಕೋಣೆಯ ಮೂಲೆಯೊಂದ ರಲ್ಲಿ ಮಲಗುತ್ತಾಳೆ. ಇದೇ ಅವಕಾಶವೆಂದು ದಾಸಯ್ಯ ಸಾವ ಕಾಶವಾಗಿ ಒಳಹೋಗಿ ಮಲಗಿದ ಕುಸುಮಾಲೆಯ ಕೈ ಹಿಡಿಯು ತ್ತಾನೆ. ಹೌಹಾರಿದ ಕುಸುಮಾಲೆ 'ಬಾಯ್ಬಾಯಿ ಬಡಿದುಕೊಳ್ಳು ತ್ತಾಳೆ. ಅವಳ ಒದರಾಟಕ್ಕೆ ಎಚ್ಚೆತ್ತ ಏಳು ಜನ ಅಣ್ಣಂದಿರು ದೊಣ್ಣೆಬಡಿಗೆಗಳಿಂದ ದಾಸಯ್ಯನಿಗೆ ಬಾರಿಸುತ್ತಾರೆ. ಆತ ಬಿಡಿ ಸಿಕೊಂಡು ಅವರಿಗೆ ಅವರ 'ಏಳುಕೊಟ್ಟಿಗೆ ಬರಿದಾಗಲಿ, ಏಳು ಕೊಟ್ಟಿಗೆ ಎಮ್ಮೆ ಸಾಯಲಿ' ಎಂದು ಶಾಪ ಹಾಕುತ್ತಾ ಅಲ್ಲಿಂದ ಕಾಲು ಕೀಳುತ್ತಾನೆ.

ಎಂದಿನಂತೆ ಗೌಡನ ಆರು ಜನ ಹೆಣ್ಣುಮಕ್ಕಳು ಕೆಂಡ ಪ್ಪನ ಕೆರೆಯ ಬಳಿ ಗೆಣಸು ಕೀಳಲು ಬಂದು ತಮ್ಮ ಕಾರ್ಯ ಮುಗಿಸಿ ಹಿಂದಿರುಗುತ್ತಾರೆ. ಆದರೆ ಕಿರಿಯುವಳಾದ ಕುಸುಮಾಲೆ ತಡಮಾಡಿ ಬಂದು ಒಂಟಿಯಾದಳು. ಆದರೂ ಗೆಣಸು ಕಿತ್ತು ಹೊರೆ ಕಟ್ಟಿದಳು. ಆದರೆ ಎತ್ತಿ ಕೊಡಲು ಯಾರಿಲ್ಲ, ಹೊತ್ತು ಮುಳುಗುವ ಸಮಯ ಸಮೀಪಿಸುತ್ತದೆ. ಇದೇ ಸಂದರ್ಭಕ್ಕಾಗಿ ರಂಗಯ್ಯ ಮುದುಕನ ವೇಷದಲ್ಲಿ ಅಲ್ಲಿ ಕಾಣಿಸಿಕೊಂಡು ಉಪಾ ಯವಾಗಿ ಅವಳಿಂದ 'ಮದುವೆಯಾಗ್ತೀನಿ' ಅನ್ನಿಸಿಕೊಂಡು ಗೆಣ ಸಿನ ಹೊರೆ ಎತ್ತಿ ಕೊಡುತ್ತಾನೆ.

ಕುಸುಮಾಲೆಯ ಮನೆಯವರನ್ನು ಮದುವೆಗೆ ಒಪ್ಪಿಸುವದಕ್ಕಾಗಿ ಕೊರವಂಜಿಯ ವೇಷ ಹಾಕಿ ಸೋಲಿಗರ ಆ ದಡ್ಡಿಗೆ ಮತ್ತೆ ಬರುತ್ತಾನೆ. ಈಗಾಗಲೆ ದಾಸಯ್ಯನಾಗಿ ಬಂದಾಗ ಕೊಟ್ಟ ಶಾಪ ನಿಜವಾಗುತ್ತ ನಡೆದು ತನ್ನ ಪರಿಣಾಮ ಬೀರಿರುತ್ತದೆ. ಈ ಸಂದರ್ಭದಲ್ಲಿ ಗೌಡನ ಹೆಂಡತಿ ಕೊರವಂಜಿಯನ್ನು ಕರೆದು ಕಣಿ ಕೇಳಿದಾಗ, ಕೊರವಂಜಿ ಈ ಹಿಂದೆ ನಿಮ್ಮಲ್ಲಿಗೆ ಬಂದ ದಾಸಯ್ಯನಿಗೆ ಮದುವೆ ಮಾಡಿಕೊಟ್ಟರೆ ಮಾತ್ರ ಕೇಡು ತಪ್ಪುವುದು. ಇಲ್ಲವಾದರೆ ಹೆಚ್ಚಿನ ಅಪಾಯವೆಂದು ಹೆದರಿಸುತ್ತಾಳೆ. ಶಾಪದಿಂದ ಬಿಡುಗಡೆಯಾದರೆ ಸಾಕು ಎಂದ ಗೌಡನ ಹೆಂಡತಿ ಒಪ್ಪುತ್ತಾಳೆ. ಆ ಪ್ರಕಾರ ಮತ್ತೆ ದಾಸಯ್ಯನ ವೇಷದಲ್ಲಿ ರಂಗಯ್ಯ ಬಂದಾಗ ಅವನಿಗೆ ಭಯ–ಭಕ್ತಿಯಿಂದ ಪೂಜಿಸಿ ಕುಸುಮಾಲೆಯನ್ನು ಧಾರೆ ಎರೆಯುತ್ತಾರೆ. ಈ ರೀತಿ ವಿವಾಹದೊಂದಿಗೆ ಪ್ರಣಯ ಪ್ರಸಂಗ ನಿಶ್ಚಿತ ಗುರಿ ತಲುಪುತ್ತದೆ.

ಇಲ್ಲಿ ರಂಗ, ಕುಸುಮಾಲೆಗೆ ಮನಸೋತು ಅವಳನ್ನು ಒಲಿಸಿಕೊಳ್ಳಲು ಹಾಕುವ ವೇಷ, ಹೂಡುವ ಆಟ, ಪಡುವ ಪಾಡು, ಲೌಕಿಕ ಪ್ರಣಯೋಚಿತ ಧಾಟಿಯದ್ದಾಗಿದೆಯಲ್ಲದೆ. ಹಾಸ್ಯಭರಿತವಾಗಿದೆ. ಕುಸುಮಾಲೆಯೊಬ್ಬಳೆ ಮನೆಯಲ್ಲಿ ಮಲಗಿದಾಗ ಏಕಾಏಕಿ ಹೋಗಿ ಅವಳ ಕೈಹಿಡಿದು ಫಜೀತಿಗೊಳಗಾಗುವ ಪ್ರಸಂಗವಂತೂ ರೋಚಕವಾಗಿದ್ದು, ರಂಗಯ್ಯನ ಮುಗ್ಧತೆ ಪ್ರಣಯೋತ್ಕಟತೆಗಳನ್ನು ಸುಂದರವಾಗಿ ನಿರೂಪಿಸಿದೆ.

ಮೈಸೂರು ಕಡೆಯ ಕಂಸಾಳೆ ಸಂಪ್ರದಾಯದವರಲ್ಲಿ ಪ್ರಚಲಿತವಾದ ಕಥನಗೀತದಲ್ಲಿ ಬರುವ ನಂಜುಂಡ–ಚೆಟ್ಟಿವ

ಚಾಮುಂಡಿ ಇಬ್ಬರ ಪ್ರಣಯ ಕಥೆಯು ಹಲವು ದೃಷ್ಟಿಗಳಿಂದ ವೈಶಿಷ್ಟ್ಯಪೂರ್ಣ. ಸ್ನಾನಕ್ಕೆ ಹೋದಾಗ ಕಾಣಿಸಿಕೊಂಡ ಒಲವು-ಅಗಲಿಕೆ-ವಿರಹತಾಪ-ಪ್ರಣಯ ರಾಯಭಾರ-ಕಳ್ಳಭೇಟಿ-ಜಗಳ ಬ್ರಹ್ಮನ ಸುಳ್ಳುಶಾಸ್ತ್ರ ಮೊದಲಾದವುಗಳಿಂದ ಕೂಡಿ ಸಂಕೀರ್ಣವೂ ರಂಜಕವೂ ಆಗಿದೆ. ಚಾಮುಂಡಿ ನಂಜುಂಡನ ಎರಡನೆಯ ಹೆಂಡತಿಯ ಸ್ಥಾನ ಪಡೆಯುವವರೆಗಿನ ಕಥಾ ವಿಸ್ತಾರ ಕುತೂಹಲಕರವೂ ನಾಟಕೀಯವೂ ಆದ ಸನ್ನಿವೇಶಗಳಿಂದ ಗಮನ ಸೆಳೆಯುತ್ತದೆ.

ರಾಕ್ಷಸರ ಸಂಹಾರಕಾರ್ಯ ನೆರವೇರಿಸಿ ಬೆಟ್ಟದ ಚಾಮುಂಡಿ ಸ್ನಾನಕ್ಕೆಂದು ನಂಜನಗೂಡಿನ ಕಪಿನಿ-ಕಾವೇರಿ ನದಿಗೆ ಬರುತ್ತಾಳೆ. ಸ್ನಾನ ಮಾಡಿ ಬಿಳಿಯ ಪತ್ತಲವನ್ನುಟ್ಟು 'ಚಿನ್ನದ ಸಿಕ್ಕಟ್ಟಿಗೆ ರನ್ನದ ಬಾಚಣಿಕೆಯಿಂದ' ಏಳು ಮಾರುದ್ದದ ಜಡೆ ಬಾಚಿಕೊಂಡು ಸಿದ್ಧಳಾಗುವಷರೊಳಗೆ ಕೈಯಲ್ಲಿ ತಾಮ್ರದ ಚೊಂಬು, ರುದ್ರಾಕ್ಷಿ, ಕಾಪಿ, ಕಮಂಡಲುಗಳೊಂದಿಗೆ ನಂಜುಂಡ ಅಲ್ಲಿಗೆ ಬಂದ. ಮಿಂದು ಮಡಿಯಾಗಿ, ಅಂಗೈಯಲ್ಲಿ ಲಿಂಗ ಹಿಡಿದು ಪೂಜೆ ಮಾಡುತ್ತಾನೆ. ಆತ ಪೂಜೆ ಮುಗಿದು ದೃಷ್ಟಿಯನ್ನು ಪಕ್ಕ ಹೊರಳಿಸಿದಾಗ ನಂಜುಂಡ ಕಂಡದ್ದು ಚಾಮುಂಡಿಯನ್ನು;

> ಮಾರುದ್ದ ಮಂಡೆಯ ಸಿಲುಕು ಹೊಡೀತಾ ನಿಂತಿದ್ದಳಲ್ಲ
> ಸೂರ್ಯ ಕೋಟಿ ಪ್ರಕಾಶವಾಗಿ ಸುಳೀತಾ ಇದ್ದಳು.

ಅವಳ ರೂಪ ರಾಶಿ ಅವನನ್ನು ಸೆರೆ ಹಿಡಿದು ಬಿಡುತ್ತದೆ. ಈಗಾಗಲೇ ದೇವೀರಮ್ಮ (ನಾರಾಯಣನ ತಂಗಿ) ಸೋಮಾಜಮ್ಮಾ (ದೇವೇಂದ್ರನ ಮಗಳು) ಇಬ್ಬರು ಹೆಂಡರಿದ್ದರೂ

ಅವರಿರ್ವರಿಗಿಂತಲೂ ಈಕೆ 'ಉನ್ನತ'ವಾಗಿ ಕಾಣಿಸುತ್ತಾಳೆ. ಅವಳ ಬಳಿ ಹೋಗಿ ಮಾತನಾಡಿಸುವ ಚಪಲಕ್ಕೆ ಒಳಗಾಗು ತ್ತಾನೆ. ನೇರ ಹೋಗಿ 'ಅಮ್ಮಾ ನೀನು ಯಾರು ?' ಎಂದು ತಟ್ಟನೆ ಮುಂಗೈ ಹಿಡಿದು ಪ್ರಶ್ನಿಸಿಯೇ ಬಿಡುತ್ತಾನೆ. ಸಹಜ ವಾಗಿಯೇ ಅವಳು ಕೈಬಿಡಿಸಿಕೊಳ್ಳುತ್ತಾಳೆ. ಪರಸ್ಪರ ಪರಿ- ಚಯವಾಗುತ್ತದೆ. ನಂಜಕಾಸುರ ಸಂಹಾರಕ ನಂಜನಗೂಡಿನ ನಂಜುಂಡನೆಂದು ಆತ ಹೇಳಿದೊಡನೆ, ತಾನು ಹಿಮಾಚಲವಲ್ಲಿ ರುವ ಮಾವೂರ ಲಿಂಗಯ್ಯನ ಮಗಳು ಚಾಮುಂಡಿ ಎಂದು ಆಕೆ ಹೇಳುತ್ತಾಳೆ ಆಕೆಯ ಮಾತು ಮುಗಿಯುವುದೆ ತಡ ನಂಜುಂಡ ಬಹಳ ಸಂತೋಷದಿಂದ 'ಹಾಗಾದರೆ ನಿನ್ನ ತಂದೆ ನನಗೆ ಸೋದರ ಮಾವ. ನೀನು ನನಗೆ ಸಾಲಾವಳಿ, ನೀನು ನನಗೆ ಹೆಂಡ್ತಿ ಆಗು ಚಾಮುಂಡೇಶ್ವರಿ' ಎಂದು ನೇರವಾಗಿ ಪ್ರಸ್ತಾಪಿಸಿಯೇ ಬಿಡುತ್ತಾನೆ ಆಗ ಆಕೆ 'ನಿಮಗೆ ಈಗಲೆ ಮದುವೆಯಾಗಿ ಇಬ್ಬರು ಹೆಂಡಿರಿರುವರಲ್ಲ' ಎಂದು ಕೇಳು ತ್ತಾಳೆ. ಅವಕ್ಕೆ ನಂಜುಂಡ 'ಅಮ್ಮಾ ನನ್ನ ಇಬ್ರು ಹೆಂಡ್ತೀರ ಬಿಟ್ರು ಕೂಡ ನಿನ್ನ ಬಿಡಾಕಿಲ್ಲ' ಎಂದು ಸುಳ್ಳು ಪ್ರಮಾಣ ಮಾಡಿ ನಂಬಿಸುತ್ತಾನೆ. ಆಟಕ್ಕೊಪ್ಪಿದ ಚಾಮುಂಡಿಯೊಂದಿಗೆ ಮೈಸೂರಿನ ಬೆಟ್ಟಕ್ಕೆ ಬಂದು ಮೂರು ವಾರಗಳ ಕಾಲ ಪ್ರೇಮ ಸಾಗರದಲ್ಲಿ ಬಾಹ್ಯ ಜಗತ್ತಿನ ಪರಿವೆಯಿಲ್ಲದೆ ಪರವಶರಾಗು ತ್ತಾರೆ. ಈ ರೀತಿ ಮೂರು ವಾರಗಳನ್ನು ಅವಳೊಂದಿಗೆ ಕಳೆದು ನಂಜುಂಡ ಚಾಮುಂಡಿಗೆ—'ಜಾತ್ರೆ ಹತ್ತಿರ ಬಂತು ಭಕ್ತರ ಅಹವಾಲುಗಳನ್ನು ಕೇಳಿಕೊಂಡು ಬರುವೆ' ಎಂದು ಹೇಳಿ ನಂಜನಗೂಡಿಗೆ ಮರಳುತ್ತಾನೆ.

ನಂಜುಂಡನ ದಾರಿ ಕಾಯುತ್ತ ಚಾಮುಂಡಿ ಅವನ ವಿರಹ ತಾಪದಲ್ಲಿ ಬೇಯುತ್ತಾಳೆ. ನಿದ್ದೆಯಲ್ಲಿ ಕೆಟ್ಟ ಕನಸು ಕಂಡು ಆತಂಕಗೊಂಡು ಸಮೀಪದ ಬೆಟ್ಟದಲ್ಲಿ ವಾಸವಾದ ತನ್ನ ತಂಗಿ ಉತ್ನಳ್ಳಿ ಮಾರಮ್ಮನನ್ನು ಬರಮಾಡಿಕೊಂಡು ತನ್ನ ಸ್ಥಿತಿಗತಿಯನ್ನು ನಿವೇದಿಸುತ್ತಾಳೆ. ನಂಜುಂಡನನ್ನು ಹೋಗಿ ಕರೆತರಲು ಆಗ್ರಹಿಸುತ್ತಾಳೆ. 'ನಾಳೆಯೇ ಬರುವೆನೆಂದು ಹೇಳಿ ಹೋಗಿ ತಿಂಗಳಾದರೂ ಅವನ ಸುಳಿವಿಲ್ಲ ಮನಸ್ಸಿಗೆ ನೆಮ್ಮದಿ ಇಲ್ಲ.

ಸರಸ ಒಂದಾಡನಿಲ್ಲ ಅರುಸಣದ ನೀರ ಮಿಂದಿಲ್ಲ.
ತ ರುಬಿಗೆ ಹೂವ ಮುಡಿಸಿಲ್ಲ—ತಂಗ್ಯಮ್ಮಾ
ಸರಸಕೆ ನಿಮ್ಮ ಭಾವ ಬರಸಿಲ್ಲ

ಎಂದು ತಂಗಿಯ ಎದುರಿಗೆ ತನ್ನ ಮನದ ಅಳಲನ್ನು ತೋಡಿ ಕೊಳ್ಳುತ್ತಾಳೆ. ಸಿಟ್ಟಿನ ಭರದಲ್ಲಿ ನಂಜುಂಡನನ್ನು ಬೈಯಲು ಹಿಂದೆ ಮುಂದೆ ನೋಡುವದಿಲ್ಲ;

ನಿನ್ನೆ ಮೊನ್ನೆಯಿಂದ ಅವನ ಮೋಗಳ ಗ್ಯಾನ
ಅನ್ನ ಸೇರೊಲ್ದು ಜನಮುಕ ತಂಗ್ಯೆಮ್ಮಾ
ಕಳ್ಳ ಅವನಾಯುಸ್ಸು ತೊಡೆಯ ಬರಸಿಲ್ಲ.

ಅಕ್ಕನ ಸ್ಥಿತಿಗೆ ಮನಕರಗಿ ಉತ್ನಳ್ಳಿ ಮಾರಮ್ಮಾ ನಂಜನ ಗೂಡಿಗೆ ಬರುತ್ತಾಳೆ. ಇಬ್ಬರು ಹೆಂಡಿರ ನಡುವೆ ನಂಜುಂಡ ಸುಖನಿದ್ರೆ ಮಾಡುತ್ತಿದ್ದ. ಎತ್ತರ ಪ್ರದೇಶದಲ್ಲಿ ನಿಂತು ಮಾರಮ್ಮಾ ಕೂಗುತ್ತಾಳೆ.

ಸೂರ್ಯ ಕುಲದವನು ನೀನೆ
ಸೂರ್ಯ ನಂಜುಂಡ ಲಿಂಗು

ಸೂಳೇರ ಭೋಗಿ ದಯಮಾಡೊ
ಹರನೆ ದಯಮಾಡೋ

ಎಂದು. ಕೂಗಿಗೆ ಎಚ್ಚರಾದ ನಂಜುಂಡ ಏಳಬೇಕೆಂದರೆ ಎಡಕ್ಕೆ 'ಎಳೆಯ ದೇವೀರಿ ಕಾಟ' ಬಲಕ್ಕೆ ಏಳುವ ಎಂದರೆ ಕಿರಿಯೋಳು ಸೋಮಯಾಜಿ ಕಾಟ'. ಹೋಗಲಿ ಇಲ್ಲೇ ಸುಮ್ಮನಿದ್ದು ಬಿಡುವ ಅಂದರೆ 'ಬೆಟ್ಟದ ಸೂಳೆಕಾಟ'–ಹೀಗೆ ಅಂತೂ ಏನೂ ಮಾಡಲು ತೋಚದೆ ಒದ್ದಾಡುತ್ತಾನೆ. ಕೊನೆಗೆ ಒಂದು ತೀರ್ಮಾನಕ್ಕೆ ಬಂದು.

ಹಗಲಿಗೆ ಸೊಳ್ಳೆ ಕಡೆತ
ರಾತ್ರೆಗೆ ತಿಗಣೆ ಕಡೆತ
ಅತ್ತಾಗ ತೀರಿಕೊ ದೇವೀರಿ

ಎಂದು ತಬ್ಬಿ ಮಲಗಿದ ದೇವೀರಿಯನ್ನು ಒಂದು ಮಾರುದ್ದ ಸರಿಸುತ್ತಾನೆ. ಅದರಂತೆ ಅತ್ತ ಸೋಮಾಜಮ್ಮನಿಗೂ ಅದೇ ರೀತಿ ಬದಿಗೆ ಸರಿಸಿ ತಾನು ಅವರಿಗೆ ತಿಳಿಯದಂತೆ ಎದ್ದು ಅವರಿಬ್ಬರ ನಡುವೆ ತೆರವಾದ ಜಾಗದಲ್ಲಿ ತಲೆದಿಂಬು ಇಟ್ಟು ಅದರ ಮೇಲೆ ಅವರಿಬ್ಬರ ಕೈಗಳನ್ನು ಮೇಲಿರಿಸಿ ಮೇಲೆ ಜಮಖಾನದ ಮುಸುಕು ಹಾಕಿ,

'ಸೂಳೆ ಚಾಮಾಯಿ ಮನೆಗೆ
ಹೋಗಿದ್ದು ಬರೋನ್ನಂಟ
ಹಳೆಯ ತಲೆದಿಂಬೆ ನಿಮಗಂಡ
ತಬ್ಬಿಕೊಳ್ಳಿ ಮುಂಡೆ ಮಕ್ಳೆ'

ಎಂದು ತನ್ನಲ್ಲಿ ಅಂದುಕೊಂಡು ಹೊರಡುತ್ತಾನೆ. ಆದರೆ

ಚಾಮುಂಡಿ ಮನೆಗೆ ಬರಿಗೈಲಿ ಹೇಗೆ ಹೋಗುವುದು ? ಆಗ 'ಕಾಳಿಂಗ ಸರ್ಪ'ಬಂದು ಪಣದ ಸಹಾಯ ಮಾಡುತ್ತಾನೆ. ಒಡವೆ ವಸ್ತ್ರ ತೆಗೆದುಕೊಂಡು ಜೋಳಿಗೆಯಲ್ಲಿ ಹಾಕಿಕೊಂಡು ಹೊರಡುತ್ತಾನೆ. ಆದರೆ ದಾರಿಯಲ್ಲಿ ನಂದಿ ಎದುರಾಗುತ್ತಾನೆ. ನಂದಿ ಇಷ್ಟು ಹೊತ್ತಿನಲ್ಲಿ ಎಲ್ಲಿಗೆ ಹೊರಟಿರುವಿ ಎಂದು ಪ್ರಶ್ನಿಸಿದಾಗ ಸುಳ್ಳು ಕಾರಣವೊಂದನ್ನು ಹೇಳುತ್ತಾನೆ ನಂಜುಂಡ :

'ಮೈಸೂರಲ್ಲಿ ಒಂದು ಹುಡುಗೀಗೆ
ಬೆನ್ನುಪಣಿರೋಗ ಬಂದದಂತೆ
ಔಸ್ತಿ ಕೊಡಕೆ ಹೋಯ್ತಿದೀನಪ್ಪ

—ಎಂದು. ಆದರೆ ಭಾರವಾದ ಜೋಳಿಗೆ ಕಂಡು ಅದರಲ್ಲೇನು ಎಂದು ಕೇಳಿಯೇ ಬಿಡುತ್ತಾನೆ ನಂದಿ. ಆಗ 'ಅದು ಔಷಧಿ ಪೊಟ್ಟಣ' ಎಂದು ಹೇಳಿದರೂ ನಂದಿಗೆ ನಿಜ ಸಂಗತಿ ತಿಳಿದು ನಂಜುಂಡನನ್ನು ಛೇಡಿಸುತ್ತಾನೆ.

'ಛೀ ಸೂಳೆ ಚಾಮಾಯಿ ಮನೆಗೆ
ಬೇಕು ಬೇಕಾದ್ನ ತಕ್ಕೊಂಡು ಹೋಯ್ತಾ ಇದ್ದಿ
ನಾಚಿಕೆ ಬಂದಾದ ಭಾವ
ಹೇಸುಗೆ ಬಂದಾದ ನಿಂಗೆ ।

—ಎಂದು ಆಗ ನಂಜುಂಡ ಆತನಿಗೆ ನಿನ್ನ ಕೊರಳ್ಳುಂಬ ಗಂಟೆ ಹೆಣೆಸಿ ಕೊಡ್ತೀನಪ್ಪ ಎಂದು ಆಮಿಷ ತೋರಿಸಿ ಇದೊಂದು ಸಲ ತನ್ನ ಬಿಡುವಂತೆ ಅವನ ಮನವೊಲಿಸಿಕೊಂಡು ಬರುವಷ್ಟರಲ್ಲಿ ಶೇಷಣ್ಣ (=ಆದಿಶೇಷ) ಅಡ್ಡಗಟ್ಟಿಬಿಡುತ್ತಾನೆ. 'ಅಕ್ಕ ಬರೋತನಕ ನೀನಿಲ್ಲೆ ಇರು' ಅಲ್ಲಿಯುವರೆಗೆ ನಿನ್ನ ಬಿಡುವದಿಲ್ಲ,

ಎಂದು ಹೇಳಿದಾಗ, ಸಿಟ್ಟಿಗೆದ್ದ ನಂಜುಂಡ ನಾಗಬೆತ್ತದಿಂದ ಹೊಡೆದು ಶಾಪಕೊಟ್ಟು ಹಾಗೆಯೆ ಮುಂದೆ ಓಡಿಬರುತ್ತಾನೆ. ಕಲ್ಲು, ಮುಳ್ಳು, ಕಾಡು, ಬೀಡುಗಳೊಂದನ್ನೂ ಗಮನಿಸದೆ 'ಬಿದ್ದೋಟ' ಬಂದು ಬೆಟ್ಟ ಹತ್ತುತ್ತಾನೆ. ಕತ್ತಲೆಯಲ್ಲಿ ಕಳ್ಳತನ ದಿಂದ ಬಂದು ಚಾಮುಂಡಿಯ ಮುತ್ತಿನರಮನೆಯ ಬಾಗಿಲು ತಟ್ಟಿ 'ಚಾಮುಂಡೇಶ್ವರಿ ಬಾರೇ ಬಾಕುಲ ತಗೀ' ಎಂದು ಕೂಗು ತ್ತಾನೆ. ತನ್ನ ಪ್ರಿಯತಮ ಬಂದುದನ್ನರಿತ ಚಾಮುಂಡಿ ಮಂಚ ವನ್ನಿಳಿದು ಬಂದು ಪನ್ನೀರಿನಿಂದ ನಂಜುಂಡನ ಪಾದ ತೊಳೆದು ಬರಮಾಡಿಕೊಳ್ಳುತ್ತಾಳೆ. ಇಬ್ಬರೂ ಚಿನ್ನದ ಮಂಚದ ಮೇಲೆ ಕುಳಿತು ಸರಸ–ಸಲ್ಲಾಪ ನಡೆಸುತ್ತಾರೆ

ಇತ್ತ ಬೆಳಗಾದಾಗ ದೇವೀರಿ, ಸೋಮಾಜಮ್ಮಾ ಎದ್ದು ಪತಿಯನ್ನು ಸ್ನಾನಕ್ಕೆ ಎಬ್ಬಿಸಲು ಹೊದಿಕೆ ತೆಗೆದಾಗ ಅಲ್ಲೇ- ನಿದೆ ? 'ಉದ್ದೀನ ಮೂಲೆ ಹಂಗೆ ಹೊರಳಿ ಉಳ್ಳಾಡುತ್ತದೆ, ತಲೆದಿಂಬು!' ಸಿಟ್ಟಿಗೆದ್ದ ದೇವೀರಮ್ಮಾ ಸೋಮಾಜಮ್ಮನಿಗೆ ವಿಷಯ ತಿಳಿಸುತ್ತಾಳೆ :

ಸೋಮಾಜಿ ಹಿಕ್ಮತ್ತು ಮಾಡ್ಬಿಟ್ಟ ಕಳ್ಳ
ಅವನ ಆಯ್ಸು[೧] ತೊಡಿಯ
ಅವರಪ್ಪನ ತಿನ್ನ
ಅವನ ಔಂಸ[೨] ಅಡಹೋಗ.

ಅಡಿಟಿಪ್ಪಣಿ ೧. ಆಯ್ಸು = ಆಯುಷ್ಯ
೨. ಔಂಸ = ವಂಶ

ಎಂದು ಕಿಡಿ ನುಡಿಯುತ್ತಾಳೆ. ಆತ ಚಾಮುಂಡಿ ಮನೆಗೆ ಹೋಗಿರುವುದು ನಿಶ್ಚಿತವೆಂದು ನೇರವಾಗಿ ದೇವೀರಿ ಬೆಟ್ಟಕ್ಕೆ ಬಂದು ದೇವಸ್ಥಾನದ ಕಿಟಕಿಯಲ್ಲಿ ಇಣುಕಿದಾಗ ಚಾಮುಂಡಿ-ನಂಜುಡರಿಬ್ಬರೂ ಸುಖ-ಸಲ್ಲಾಪ ನಡೆಸಿರುವುದು ಕಣ್ಣಿಗೆ ಬೀಳುತ್ತದೆ. ಮೈಯೆಲ್ಲ ಕೋಪದಿಂದ ಉರಿದು ದೇವೀರಿ ಚಾಮುಂಡಿಗೆ 'ಏನೇನು ತಿಳಿಯದ ಮುಗ್ಧ ನನ್ನ ಗಂಡನನ್ನ ಕಣ್ಣು ಹೊಡೆದು ಕರದೇನೆ ಸವತಿ ಮುಂಡೆ ನಿನ್ನ ಕಣ್ಣೀನ ಗೊಂಬೆ ಒಡೆದೋಗ್ಲಿ' ಎಂದು ಗುಡುಗುತ್ತಾಳೆ. ದೇವೀರಿ-ಚಾಮುಂಡಿ ಇಬ್ಬರ ನಡುವೆ ದೊಡ್ಡ ಜಗಳವೆ ನಡೆಯುತ್ತದೆ. ಹೇಗೋ ಜಗಳ ಬಿಡಿಸಿ ಉಪಾಯದಿಂದ ದೇವೀರಮ್ಮನ ಜೊತೆ ನಂಜನಗೂಡಿಗೆ ನಂಜುಂಡ ಮರುಳುತ್ತಾನೆ. ಆದರೆ ದೇವೀರಿ ಆತನನ್ನು ಮನೆಯೊಳಗೆ ಕರೆದುಕೊಳ್ಳದೆ ಬಟ್ಟೆಬರೆಗಳನ್ನು ಕಳಚಿಹಾಕಿ ಬತ್ತಲೆಗೊಳಿಸಿ ಮನೆಯಾಚೆ ತಳ್ಳುತ್ತಾಳೆ. ಕೊನೆಗೆ ನಂಜುಂಡ ತೇರಿಗೆ ಕಟ್ಟಿದ ತೋರಣದ ಬಟ್ಟೆಯನ್ನು ತೆಗೆದು ಕೊಂಡು ಮಾನ ಮುಚ್ಚಿಕೊಳ್ಳಬೇಕಾಗುತ್ತದೆ. ಹೆಂಡತಿಯ ಕೈಯಲ್ಲಿ ಇಂಥ ಉಗ್ರಶಿಕ್ಷೆ ಅನುಭವಿಸಿ ಆತ ನೇರವಾಗಿ ಬ್ರಹ್ಮ ಲೋಕಕ್ಕೆ ಬಂದು ಬ್ರಹ್ಮನಿಗೆ ತನ್ನಿಬ್ಬರು ಹೆಂಡಂದಿರಿಗೆ ಸುಳ್ಳು ಶಾಸ್ತ್ರ ಹೇಳುವಂತೆ ಕೇಳುತ್ತಾನೆ. ಅಲ್ಲಿಂದ ಬೆಟ್ಟಕ್ಕೆ ಬಂದು ಚಾಮುಂಡಿಗೆ ಕೊರವಂಜಿ ವೇಷ ಹಾಕಿಕೊಂಡು ಬರಲು ತಿಳಿಸಿ ನಂಜನಗೂಡಿಗೆ ಹಿಂದಿರುಗಿ ಸತ್ತವನಂತೆ ಮಲಗುತ್ತಾನೆ. ಸೋಮಾಜಿ ದೇವೀರಮ್ಮ ನಂಜುಂಡನ ಅವಸ್ಥೆ ನೋಡಿ ಅವನು ನಿಜಕ್ಕೂ ಈ ಚಿಕ್ಕ ವಯಸ್ಸಿನಲ್ಲಿ ತಮ್ಮಿಬ್ಬರನ್ನೂ ವಿಧವೆಯರ-ನ್ನಾಗಿ ಮಾಡಿ ಕೈಬಿಟ್ಟು ಹೋದನಲ್ಲ ಎಂದು ಗೋಳಾಡುತ್ತಾರೆ. ಅಲ್ಲಿಗೆ ಬ್ರಹ್ಮದೇವ ಬಂದು

'ಅವ್ವಾ ಎಡಕಂಟಕ ಎಡವಿತ್ತಿನಲ್ಲಿ
ನಿನ್ನ ಗಂಡನ ಪ್ರಾಣ ಹೋಗಿದೆ'

ಎಂದು ಸುಳ್ಳಶಾಸ್ತ್ರ ಹೇಳಿಹೋಗುತ್ತಾನೆ. ಇತ್ತ ಚಾಮುಂಡಿ ಇದೆಲ್ಲವನ್ನು ತಿಳಿದು ಕೊರವಂಜಿ ವೇಷದಲ್ಲಿ ಅಲ್ಲಿಗೆ ಆಗಮಿಸುತ್ತಾಳೆ. ಕೊರವಂಜಿಯನ್ನು ಕಂಡು ಅವರಿಬ್ಬರೂ ಆಕೆಯನ್ನು ಬರಮಾಡಿಕೊಂಡು ಗಂಡನನ್ನು ಬದುಕಿಸುವ ಉಪಾಯವಾವುದೆಂದು ಕೇಳುತ್ತಾರೆ. ಆಕೆ ಇದುವರೆಗೆ ಆದ ತಪ್ಪನ್ನೆಲ್ಲ ಒಪ್ಪಿಕೊಂಡು ಚಾಮುಂಡೇಶ್ವರಿಗೆ ತಪ್ಪುಕಾಣಿಕೆ ಕೊಟ್ಟರೆ ನಂಜುಂಡ ಉಳಿಯುವದಾಗಿ ಹೇಳುತ್ತಾಳೆ. ಗಂಡ ಬದುಕಿದರೆ ಸಾಕೆಂದು ದೇವೀರಮ್ಮ ಅದಕ್ಕೊಪ್ಪಿ ತಾನು ಚಾಮುಂಡಿಯನ್ನು ಬೈದದ್ದು ಸರ್ವಥಾ ತಪ್ಪೆಂದು ತನ್ನ ಪತಿ ತಮ್ಮ ಬಳಿ ಆರು ತಿಂಗಳು ಚಾಮುಂಡಿ ಬಳಿ ಆರುತಿಂಗಳು ಇರಲಿ ಎಂದು ಹೇಳಿ ತಪ್ಪುಕಾಣಿಕೆ ಕೊಡುತ್ತಾಳೆ. ನಂಜುಂಡ ಆಗ ಅನ್ನಂತೆ ಮೇಲೇಳುತ್ತಾನೆ. ಚಾಮುಂಡಿಯ ಬಳಿಗೆ ಹೋಗಲು ಒಪ್ಪದಂತೆ ನಟಿಸಿದಾಗ ದೇವೀರಮ್ಮಾ ಒತ್ತಾಯದಿಂದ ಅವರ ಪ್ರಾಣ ಉಳಿದದ್ದೇ ಅವಳಿಂದ ಎಂದೂ ಹೇಳಿ ಆಭರಣಗಳ ಸಮೇತ ಕಳುಹಿಸಿ ಕೊಡುತ್ತಾಳೆ. ಮೂವರು ಸವತಿಯರಲ್ಲಿ ಪ್ರೀತಿ ಏರ್ಪಟ್ಟು ಸುಖವಾಗಿರುವದರೊಂದಿಗೆ ಕಥನಗೀತ ಕೊನೆಗೊಳ್ಳುತ್ತದೆ.

ಇಲ್ಲಿ ನಂಜನಗೂಡಿನ ನಂಜುಂಡನಿಗೂ ಮೈಸೂರಿನ ಹತ್ತಿರದ ಬೆಟ್ಟದ ಚಾಮುಂಡಿಗೂ ಸಂಬಂಧ ಕಲ್ಪಿಸಿ ಅವರಿಬ್ಬರನ್ನು ಪ್ರಣಯದಾಟಕ್ಕೆ ಹಚ್ಚಿ ಮೋಜಿನ ಸಂಗತಿಗಳನ್ನು ಕಲ್ಪಿಸಿ ಖುಷಿಪಡುವ ಜಾನಪದರ ರಸಿಕಪ್ರಜ್ಞೆ ನಿಜಕ್ಕೂ ಆಶ್ಚರ್ಯಕರ

ವಾದುದು. ಇಲ್ಲಿ ನಂಜುಂಡ ನಡೆಸುವ ಕಳ್ಳಪ್ರಣಯ. ಇಬ್ಬರು ಹೆಂಡಂದಿರು ಹಾಗೂ ನವಪ್ರಿಯತಮೆ ಚಾಮುಂಡಿ–ಹೀಗೆ ಮೂವರ ಕೈಯಲ್ಲಿ ಸಿಕ್ಕಿ ಫಜೀತಿಗೊಳಗಾಗುವ ರೀತಿ ಹಾಸ್ಯ ಪೂರ್ಣವಾಗಿದೆ. ಪ್ರಣಯದಲ್ಲಿಯ ಸರಸ–ವಿರಸಗಳು ಲೌಕಿಕ ಗಂಡುಹೆಣ್ಣಿನ ಗಂಡು ಹೆಣ್ಣಿನ ಗುಣಸ್ವಭಾವ–ಮನೋಧರ್ಮ ಗಳಿಗೆ ಅನುಗುಣವಾಗಿವೆ. ಇಲ್ಲಿಯ ಪಾತ್ರಗಳಿಂದ ನಂಜುಂಡ, ದೇವೀರಮ್ಮ, ಸೋಮಾಜಮ್ಮ ಹಾಗೂ ಚಾಮುಂಡಿಯರು ನೂರಕ್ಕೆ ನೂರು ಜಾನಪದರಾಗಿ ತೋರುತ್ತಾರಲ್ಲದೆ ಅವರು ಯಾವ ರೀತಿಯಲ್ಲಿಯೂ ಅಲೌಕಿಕ, ಅಮಾನುಷರಾಗಿ ತೋರು ವುದಿಲ್ಲ ಈ ಗೀತೆಯ ಕಥನಕುಶಲತೆ, ಶೈಲಿ ವಿಶೇಷವಾಗಿ ಗಮನ ಸೆಳೆಯುತ್ತವೆ.

೭. ಸಮಾರೋಪ

ಇದುವರೆಗಿನ ಸ್ಥೂಲ ಸಮೀಕ್ಷೆಯ ಆಧಾರದ ಮೇಲೆ ಹೇಳುವುದಾದರೆ ಇಲ್ಲಿಯ ಜನಪದ ಗೀತಗಳಲ್ಲಿ ಕಾಣುವ ಶೃಂಗಾರ ಅದರ ಪೂರ್ಣರೂಪದಲ್ಲಿ ಪ್ರಕಟವಾಗಿಲ್ಲದಿರುವುದು ಸ್ಪಷ್ಟವಾಗುತ್ತದೆ. ಏಕೆಂದರೆ ಬಹಳಷ್ಟು ಗೀತೆಗಳಲ್ಲಿ ವ್ಯಕ್ತ ವಾಗಿರುವ ಶೃಂಗಾರ ಬಿಡಿ ಬಿಡಿ ರೂಪದ್ದು. ಇಲ್ಲಿಯ ಶೃಂಗಾರ ಚಿತ್ರಗಳು ಒಂದು ಕ್ಷಣದ ಚಿತ್ತವೃತ್ತಿಯ, ಒಂದು ಸಂದರ್ಭ–ಸನ್ನಿವೇಶದ, ವಿವಿಧ ಪ್ರಣಯಾವಸ್ಥೆಗಳ ಮುಕ್ತಕಗಳ ಮಾದರಿಯ ಚಿತ್ರಗಳಾಗಿದ್ದು ಅವು ಒಂದೊಂದು ತಮ್ಮಷ್ಟಕ್ಕೆ ತಾವು ಪ್ರತ್ಯೇಕವಾಗಿ ನಿಂತು ಬಿಡುತ್ತವೆ. ಯಾವುದೇ ವಿಶೇಷ ಬಣ್ಣಗಾರಿಕೆ, ಕಲ್ಪನಾ ವೈಚಿತ್ರ್ಯಗಳನ್ನು ತೊಟ್ಟು ಆದರ್ಶದ

ಮುಖವಾಡವನ್ನು ಹಾಕಿರುವಂಥದಲ್ಲ—ಇಲ್ಲಿಯ ಶೃಂಗಾರ. ಇದು ಶಿಷ್ಟ ಕಾವ್ಯಗಳಲ್ಲಿ ಕಾಣುವಂತೆ ಅವಾಸ್ತವಿಕವೂ, ಅಲೌಕಿಕವೂ, ಕಾಲ್ಪನಿಕವೂ, ಕವಿಸಮಯಗಳ ಚಮತ್ಕಾರಿಕ ಕೃತಕ ಧಾಟಿಯದ್ದು ಅಲ್ಲ. ಏನಿದ್ದರೂ ನಿತ್ಯ ಬದುಕಿನಲ್ಲಿ ಪ್ರತಿಯೊಬ್ಬ ತನ್ನ ಬದುಕಿನಲ್ಲಿ ಅನುಭವಿಸುವ ಪ್ರಣಯ ಪ್ರಪಂಚದ ವಿವಿಧ ಮುಖಗಳು, ಮಗ್ಗುಲಗಳು ಇಲ್ಲಿ ಬಹಳೆಡೆಗೆ ವಾಚ್ಯವಾಗಿ, ಕೆಲವೆಡೆ ಸಾಂಕೇತಿಕವಾಗಿ ಸೂಚ್ಯವಾಗಿ ಅಭಿವ್ಯಕ್ತಿವಾಗಿರುವಂಥವು. ಇಲ್ಲಿಯ ಅಭಿವ್ಯಕ್ತಿಯ ರೀತಿ ಬಿಚ್ಚು ಬಗೆಯದಾದರೂ ಸ್ವಾಭಾವಿಕ ಸಹಜವೆನ್ನುವಂಥಹದ್ದಾಗಿರುವುದರಿಂದ ಹೆಚ್ಚು ರುಚಿಸುತ್ತದೆ. ವಿವಾಹಪೂರ್ವ ಹಾಗೂ ವಿವಾಹಬಾಹಿರ ನೆಲೆಗಳಲ್ಲಿ ಕಾಣುವ ಪ್ರಣಯದ ಉನ್ಮಾದ. ಉತ್ಕಟತೆ, ವಿವಿಧ ವಿಲಾಸಗಳ ಚಿತ್ರಣದಲ್ಲಿ ಕೆಲವು ಸಲ ಔಚಿತ್ಯದ ಗೆರೆಯನ್ನು ಮೀರುವಂತಿದ್ದರೂ ಜನಪದ ಕಾವ್ಯಕ್ಕೆ ಅದು ಸಹಜವಾದುದು. ಯಾಕೆಂದರೆ ಅಲ್ಲಿಯದು ಮಡಿವಂತಿಕೆಯ ಆವರಣ ತೊಟ್ಟುಕೊಂಡಿರುವಂಥದಲ್ಲ. ಅಲ್ಲಿಯ ಅಭಿವ್ಯಕ್ತಿ ಪ್ರಾಮಾಣಿಕವಾದುದರಿಂದ ಕೆಲಭಾಗದಲ್ಲಿ ಶೃಂಗಾರ ವಾಚ್ಯವಾಗಿ ಅಶ್ಲೀಲವಾಯಿತೆಂದು ನಾಗರಿಕರಿಗೆ ತೋರಿದರೂ ಜನಪದ ಜೀವನದ ಸಮಗ್ರ ಹಿನ್ನೆಲೆಯಲ್ಲಿಟ್ಟು ನೋಡಿದಾಗ ಅದರ ನೈಜತೆಯ ಅರಿವಾಗುತ್ತದೆ. ದಾಂಪತ್ಯಶೃಂಗಾರದ ಸ್ವರೂಪ, ಅದರ ಮಾಧುರ್ಯ, ಸೊಗಸು ಒಂದು ರೀತಿಯದ್ದಾದರೆ, ವಿವಾಹ ಪೂರ್ವ ಹಾಗೂ ವಿವಾಹಬಾಹಿರ ಶೃಂಗಾರದಲ್ಲಿ ಕಾಣುವ ಸಂಘರ್ಷ, ಏರಿಳಿತಗಳು, ಭಗ್ನಪ್ರಣಯದ ನೋವು, ನಿರಾಶೆ, ಸಾಮಾಜಿಕ ನೈತಿಕ ಆದೇಶಗಳನ್ನು ದಾಟಿದ್ದರಿಂದ ಒದಗುವ ಅವಮಾನ, ದುರಂತಗಳನ್ನೊಳಗೊಂಡು ಹೆಚ್ಚು ಜೀವಂತ

ವಾಗಿರುವಂಥದ್ದು. ಜನಪದಗೀತಗಳಲ್ಲಿಯ ದೈವೀ ಶೃಂಗಾರ ಜಾನಪದರ ಮುಗ್ಧತೆ, ಭಾವುಕತೆ, ಸಲಿಗೆಗಳನ್ನೊಳಗೊಂಡ ಆತ್ಮೀಯ ಧಾಟಿಯ ಮಧುರ ಭಕ್ತಿಗೆ ಕನ್ನಡಿ ಹಿಡಿಯುತ್ತದೆ. ಹೀಗೆ "ಜನಪದ ಗೀತೆಗಳಲ್ಲಿ ವಿರಹವಿದೆ, ಸಮಾಗಮವಿದೆ, ಸುಡುವ ಬಯಕೆಯಿದೆ; ಅದರ ತಣಿವಿದೆ, ನೀತಿಯಿದೆ; ಅದರ ಉಲ್ಲಂಘನೆಯಿದೆ ಕೆಲವು ಗೀತೆಗಳು ಸುಖಾಂತವಾಗಿದ್ದರೆ ಮತ್ತೆ ಕೆಲವು ತಲ್ಲಣಗೊಳಿಸುವಷ್ಟು ದುರಂತವಾಗಿವೆ"[೧] ಒಟ್ಟಿನಲ್ಲಿ ಇಲ್ಲಿಯ ಶೃಂಗಾರ ಸಜೀವವೂ, ಸಶಕ್ತವೂ ಆಗಿದ್ದು ಅದರ ಅನೇಕ ಮುಗ್ಗುಲಗಳನ್ನು ತೆರೆದಿಡುವ ಜೊತೆಗೆ ವೈವಿಧ್ಯಮಯವೂ ವರ್ಣರಂಜಿತವೂ ಆಗಿರುವಂಥದು.

ಜನಪದ ಸಾಹಿತ್ಯದ ವೈವಿಧ್ಯಮಯ ಶೃಂಗಾರ ನಿರೂಪಣೆಯಲ್ಲಿ ಜನಪದ ಗೀತಗಳಲ್ಲಿಯದು ಅದರ ಒಂದು ಮುಖ ಮಾತ್ರ ಎನ್ನಬೇಕು. ಜನಪದ ನಾಟಕಗಳಾದ ಯಕ್ಷಗಾನ ಬಯಲಾಟಗಳಲ್ಲಿ ಹಾಗೂ ಜನಪದ ಕಥೆಗಳಲ್ಲಿ ಇದಕ್ಕೂ ಹೆಚ್ಚಿನ ಶೃಂಗಾರದ ಮುಖಗಳು ಕಾಣದೊರೆಯುತ್ತವೆ. ಜನಪದ ಗೀತಗಳ ಜೊತೆಯಲ್ಲಿ ಅವನ್ನೂ ಅಧ್ಯಯನ ಮಾಡಿ ನೋಡಿದಾಗ ಜನಪದ ಶೃಂಗಾರದ ಪೂರ್ಣ ಚಿತ್ರ ಲಭ್ಯವಾಗುತ್ತದೆ.

---

೧. ಡಾ. ಸಿ. ಪಿ. ಕೆ. : ಉದಯವಾಣಿ ದೀಪಾವಳಿ ವಿಶೇಷಾಂಕ (೧೯೭೨)ದ ಲೇಖನ ಜನಪದ ಶೃಂಗಾರ ಪುಟ ೨೨೨.

ಗ್ರಂಥಋಣ

೧. ಗರತಿಯ ಹಾಡು—ಸಂ : ಹಲಸಂಗಿ ಗೆಳೆಯರು

೨. ನವಲ ಕುಣಿದಾವ – ಸಂ : ಮಾದೇನೂರ ಸಂಗಣ್ಣ

೩. ಜೀವನ ಸಂಗೀತ— ,, ಸಿಂಪಿಲಿಂಗಣ್ಣ. ಪಿ ಧೂಲಾ

೪. ಬೆರಸಿ ಇಟ್ಟೇನಿ ಬೆಲ್ಲ ನೆನಗಡಲಿ
—ಸಂ : ಜ್ಯೋತಿ ಹೊಸೂ

೫. ಹೆಸರ ಹೇಳ್ತಿನಿ ಒಡಪಕಟ್ಟಿ— ,, ,, ,,

೬. ಜಾನಪದ ಪ್ರೇಮಗೀತಗಳು—ಸಂ : ಕ. ರಾ. ಕೃ.

೭. ಮಲ್ಲಿಗೆ ನಗುತಾವೆ — ,, ,, ,,

೮. ಬೆಟ್ಟದ ಚಾಮುಂಡಿ — ಸಂ : ಪಿ. ಕೆ. ರಾಜಶೇಖರ

೯. ಕೋಲು ಪದಗಳು — ಸಂ : ಮಳಲಿ ವಸಂತಕುಮಾರ

೧೦. ಜಾನಪದ ಪ್ರತಿಭೆ – ಸಂ : ಸಿ. ಪಿ. ಕೆ.

೧೧. ಜಾನಪದ ಸರಸ್ವತಿ – ,, ,,

೧೨. ಜಾನಪದ ಸಮೀಕ್ಷೆ—ಡಿ. ಕೆ. ರಾಜೇಂದ್ರ

೧೩. ಜಾನಪದ ಗೀತೆಗಳು—ಶಿವರಾಮ ಕಾರಂತ

೧೪. ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ
—ನಂ. ತಪಸ್ವೀಕುಮಾ

೧೫. ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರ ರಸ
—ಡಾ. ಕೆ. ಕೃಷ್ಣಮೂ

೧೬. ಜಾನಪದ ಸರಸ್ವತಿ – ಎಚ್. ಎಸ್. ಕೆ

ಉಪನ್ಯಾಸ ಗ್ರಂಥಮಾಲೆಯ
ಕೆಲವು ಪ್ರಕಟನೆಗಳು

---

೧. ಜನಪದ ಕಾವ್ಯದಲ್ಲಿ ಪ್ರಣಯ ಚಿತ್ರಣ

—ಬಸವರಾಜ ಸಬರದ

೨. ಜನಪದ ತ್ರಿಪದಿಗಳಲ್ಲಿ ಜೀವನಮೌಲ್ಯ

—ಎಂ. ಬಿ. ಹೂಗಾರ

೩. ಜನಪದ ಸಾಹಿತ್ಯದಲ್ಲಿ ಹಾಸ್ಯ

—ಮೃತ್ಯುಂಜಯ ಹೊರಕೇರಿ

೪. ಜನಪದ ಸಾಹಿತ್ಯದಲ್ಲಿ ಮಾತೃವಾತ್ಸಲ್ಯ

—ಲೀಲಾವತಿ ಬಿ. ತೋರಣಗಟ್ಟಿ

೫. ಜನಪದ ಕಾವ್ಯದಲ್ಲಿ ಜೀವನ ಧರ್ಮ

—ಬಿ. ವ್ಹಿ. ಮಲ್ಲಾಪೂರ

೬. ಜನಪದ ಕಾವ್ಯ

—ಗಿರಡ್ಡಿ ಗೋವಿಂದರಾಜ

೭. ಗರತಿಯ ಹಾಡುಗಳಲ್ಲಿ ಕೌಟುಂಬಿಕ ಜೀವನ ಚಿತ್ರಣ

—ದೇವೇಂದ್ರಕುಮಾರ ಹಕಾರಿ

೮. ಕನ್ನಡ ಜನಪದ ಕಾವ್ಯದಲ್ಲಿ ಭಕ್ತಿಯ ನಿರೂಪಣೆ

—ಬಸವರಾಜ ಮಲಶೆಟ್ಟಿ

೯. ಕನ್ನಡ ಜನಪದ ಸಾಹಿತ್ಯದಲ್ಲಿ ಮದುವೆ

—ಡಾ. ಎಲ್. ಆರ್. ಹೆಗಡೆ

೧೦. ಹಬ್ಬಗಳ ಜಾನಪದ ಹಾಡುಗಳು

—ಎಂ. ಎನ್. ವಾಲಿ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ